Licence No. 60.
licenced to Post without Prepayment

Reg. No. M. 1559.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೯–೦–೦.

ಸಂಪುಟ ೩೦ | ಕಾರೀಕು ೩೬–೧೦–೧೯೫೦ನೇ ಶುಕ್ರವಾರ | ಸಂಚಿಕೆ ೨೧

ಕಾಂಗ್ರೆಸ್ಸು ಪುನರ್ಘಟಿತವಾಗಬೇಕಾಗಿದೆ.

ಸಂಸ್ಥೆಯ ಹೆಸರಿನಲ್ಲಿ ಸ್ವಾರ್ಥಸಾಧಕರಿಗೆ ಸ್ಥಾನವಿಲ್ಲ.

ಕಾಂಗ್ರೆಸ್ ಅಧಿವೇಶನದಲ್ಲಿ ವಿವಿಧ ಸಮಸ್ಯೆಗಳ ಬಗ್ಗೆ ಕಾಂಗ್ರೆಸ್ ಅಧ್ಯಕ್ಷ ನೆಹರೂರವರ ಭಾಷಣ.

ಅಖಿಲ ಭಾರತ ಕಾಂಗ್ರೆಸ್ಸಿನ ೫೭ನೇ ಮಹಾಧಿವೇಶನಕ್ಕೆಂದು ಡೆಲ್ಲಿಯ ಸತ್ಯವತಿ ಕಾಲೇಜಿನಲ್ಲಿ ಕೂಡಿದ ಕಾಂಗ್ರೆಸ್ಸಿಗರನ್ನುದ್ದೇಶಿಸಿ, ಕಾಂಗ್ರೆಸ್ ಅಧ್ಯಕ್ಷ ಶ್ರೀ ಜವಾಹರ್‌ಲಾಲ್ ನೆಹರೂರವರು ಕ್ಷುಲ್ಲಕವಾದ ಅಚಾರ, ವಿಚಾರ ಪಕ್ಷಭಾವನಾ ಪ್ರಾಬಲ್ಯ, ಪರಸ್ಪರ ದೋಷಾರೋಪಣೆ, ಸಾತ್ವಿಕ ಜನಿಕ ಜೀವನ ಮತ್ತು ಸಮಾಜ ರಚನೆಯಲ್ಲಿಯ ಅಹಿತವನ್ನು ನೋಡಿಯೂ ಸಹಿಸಿಕೊಂಡಿರುವುದು:—ಇವೆಲ್ಲವುಗಳಿಂದಲೂ ದೂರವಿರಬೇಕೆಂದು ಕೇಳಿಕೊಂಡರಲ್ಲದೆ ಒಳಿತಿಗಾಗಿ ಮತ್ತು ಉದಾತ್ತ ತತ್ವಗಳ ಉದ್ಧರಣೆಗಾಗಿ ಹೋರಾಟಗಾರರಾಗಬೇಕೆಂದೂ ಕಾಂಗ್ರೆಸ್ಸಿಗರನ್ನು ಕೇಳಿಕೊಂಡರು.

ತಮ್ಮ ಜೀವಿತದಲ್ಲಿ ಐದನೆಯ ಬಾರಿಯಾಗಿ ಕಾಂಗ್ರೆಸ್ ಅಧ್ಯಕ್ಷ ಪೀಠವನ್ನು ಅಲಂಕರಿಸುತ್ತಿರುವ ೭೨ ವಯಸ್ಸಿನ ನೆಹರೂರವರು ತಾನು ಮುಖ್ಯ ಮಂತ್ರಿಯಾಗಿರುವ ರಾಷ್ಟ್ರವನ್ನು ಎದುರಿಸುತ್ತಿರುವ ಎಲ್ಲ ದೇಶ ವಿದೇಶಗಳ ಸಮಸ್ಯೆಗಳ ವಿಷಯವಾಗಿಯೂ, ತಮ್ಮ ೨೦ ಪುಟದ ಭಾಷಣದಲ್ಲಿ ವಿವರಿಸಿದ್ದಾರೆ.

"ಕಾಂಗ್ರೆಸ್ ಪ್ರಭಾವ, ಪ್ರಗತಿಪರ ಮತ್ತು ಅವಶ್ಯಕವಾದ ಸಂಸ್ಥೆಯಾಗಿಯೇ ಉಳಿದು ಭಾರತದ ತನ್ನ ಜನತೆಗೆ ಪೂರ್ಣ ದರ್ಶನವನ್ನು ನೋಡುತ್ತ ಮತ್ತು ಅವರಿಗೆ ಸೇವೆ ಸಲ್ಲಿಸುವ ತನ್ನ ಪರಂಪರೆಗನುಗುಣವಾಗಿ ಮುಂದುವರಿಯುವುದೇ ಕಾಗಿದ್ದರೆ, ನಾವು ಅದನ್ನು ಇಂದಿನ ಪರಿಸ್ಥಿತಿಗನುಗುಣವಾಗಿ ಪುನರ್ಘಟಿಸಬೇಕಾಗಿದೆ" ಎಂದೂ ಅವರು ಹೇಳಿದರು.

"ಕಾಂಗ್ರೆಸ್, ಕೇವಲ ಒಂದು ಪಕ್ಷವಲ್ಲ. ಅದಕ್ಕಿಂತಲೂ ಹೆಚ್ಚಿನದಾಗಿದೆ. ಅದಕ್ಕಿಂತಲೇ ಆ ಪಕ್ಷಕ್ಕಾಗಲಿ, ಮತ್ತಿತರ ಪಕ್ಷಗಳಿಗಾಗಲೀ ಸೇರದೇ ಇರತಕ್ಕ ಆಕಾಂಕ್ಷೆಗಳನ್ನು ಜನತೆಯು ಅದರ ವಿಶ್ವಾಸಗಳನ್ನು ಅದು ಪಡೆದಿದೆ.

ಕಾಂಗ್ರೆಸ್ಸಿನಲ್ಲಿರತಕ್ಕ ಆ ವಿಶಾಲವಾದ ಒಂದು ಶೋಟವನ್ನು ಕಾಯ್ದುಕೊಂಡು ಹೋಗಬೇಕಾಗಿದೆ. ಅದರಿಂದ ಹೀಗೆ ಮಾಡುವುದರಿಂದ ಅದು ಅಸ್ತವ್ಯಸ್ತತೆಗೆ ಕಾರಣವಾಗಕೂಡದು. ವಿಚಾರ ಶಕ್ತಿಯನ್ನು ಕಳಕೊಳ್ಳಕೂಡದು, ಅಲ್ಲದೆ ಅದರಲ್ಲಿ ವಿವಿಧ ರೀತಿಯ ವಿವಾದಾಸ್ಪದ ವಿಚಾರ ವಾರ್ತೆಗಳಿಗೆ ಅವಕಾಶವಾಗದಂತೆ ನೋಡಿಕೊಳ್ಳಬೇಕು. ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ವಿಷಯಗಳ ವಿಷಯದಲ್ಲಿಯಂತೂ ಹೀಗಾಗಗೊಡದಂತೆ ಸ್ಪಷ್ಟವಾಗಿ ನೋಡಿಕೊಳ್ಳಬೇಕು. ಕಾಂಗ್ರೆಸ್ಸಿನ ಹೆಸರಿನಲ್ಲಿ ಸಾರ್ವಜನಿಕ ಕಲ್ಯಾಣವನ್ನು ಉಪೇಕ್ಷಿಸಿ ವೈಯಕ್ತಿಕವಾದ ಲಾಭ ಮತ್ತು ಏಳಿಗೆಯನ್ನು ಬಯಸುವವರಿಗಂತೂ ಎಳ್ಳಷ್ಟೂ ಅವಕಾಶವಿರಕೂಡದು."

ಭಾವಿ ಜವಾಬಿನೆ

"ಈ ಚುನಾವಣೆಗಳಿಗೆ ಬಹಳ ಮಹತ್ವವುಂಟು. ಯಾಕೆಂದರೆ ಅವುಗಳಿಂದಲೇ ರಾಷ್ಟ್ರದ ಭಾವಿ ಆಳ್ವಿಕೆ ಸಾಗುವುದು ನಾವು ಯಾವ ತತ್ವ ಮತ್ತು ನಿಲುವುಗಳಿಗೆ ಬದ್ಧವಾಗಿರುವೆವೋ ಅವನ್ನು ಬಿಟ್ಟು ಕೊಟ್ಟು, ಚುನಾವಣೆಯನ್ನು ಗೆಲ್ಲುವ ವಿಷಯವನ್ನು ಮಾತ್ರ ಇಟ್ಟುಕೊಂಡಲ್ಲಿ, ಆ ಚುನಾವಣೆಗೆ ಏನೂ ಮಹತ್ವವಿಲ್ಲ. ಆ ತತ್ವಗಳಿಗಾಗಿ ಈ ಚುನಾವಣೆಯಲ್ಲಿ ಹೋರಾಡಿದಲ್ಲಿ ಮತ್ತು ಅದಕ್ಕೆ ತಕ್ಕಂತೆ ನಾವು ನಮ್ಮ ಹುರಿಯಾಳುಗಳನ್ನು ಆರಿಸಿದ್ದಲ್ಲಿ ಆಗ ಈ ಚುನಾವಣೆಗಳಿಗೆ ಬೆಲೆಯಬಂಟು ಮತ್ತು ಅವುಗಳಿಂದ ರಾಷ್ಟ್ರಕ್ಕೆ ನಿಶ್ಚಿತವಾಗಿಯೂ ಹಿತ ಲಭಿಸುವುದು ಕೇವಲ ಚುನಾವಣೆಯನ್ನು ಗೆದ್ದೆಯುವುದಕ್ಕಾಗಿ ನಾವು ಅಹಿತವೊಂದಿಗೆ ಸಂಧಾನಕ್ಕೆ ಎಡೆಕೊಡಲು ನಮ್ಮ ಅಸಕ್ತಿ ತೋರಿಸಿದಲ್ಲಿ ನಮ್ಮ ಹೋರಾಟದ ಅರ್ಥವನ್ನು ಕಳೆದುಕೊಂಡಂತೆ. ಮತ್ತು ಆ ರೀತಿಯಲ್ಲಿ ಯಶಸ್ವಿಯಾಗಿ ಜಯಿಸಿ ಬರುವುದರಲ್ಲಿಯೂ ಅರ್ಥವಿಲ್ಲ".

ಬದಲಾವಣೆಯ ಅಹಿತ ಎದುರಿಸುವ ಅಧಿವೇಶನ

ತಮ್ಮ ಅಧ್ಯಕ್ಷಗಾದಿಯ ಚುನಾವಣೆಯ ಮುಖ್ಯ ಜರುಗಿದ ಘಟನೆ ಮತ್ತು ಆ ನಂತರ ಉಂಟಾದ ಬದಲಾವಣೆಗಳನ್ನು ವಿವರಿಸುತ್ತ, ಶ್ರೀ ನೆಹರೂರವರು, "ಈ ಬದಲಾವಣೆಯಲ್ಲಿ ನಾನು ಪಹಿಸಿದ್ದ ಪಾತ್ರಕ್ಕೆ ಅಷ್ಟೇನೂ ಮಹತ್ವವಿಲ್ಲ. ಅದರಿಂದ ರಾಷ್ಟ್ರದಲ್ಲಿಯೂ ಕಾಂಗ್ರೆಸ್ಸಿನ ಸ್ತ್ರೀ ಪುರುಷರಲ್ಲಿ ಉಂಟಾದ ತಿಳುವಳಿಕೆ ಪ್ರತ್ಯು ಅನುಭವಗಳು ಮಹತ್ವವಾದವು. ಮುಖ್ಯ ಅವರಲ್ಲಿ ತೀವ್ರ ಗಮನವ ಕೊಡಿಸಬೇಕಾಗಿದೆ. ಈಗ ಉಂಟಾದ ಈ ಜಾಗ್ರತಿಯಿಂದಲೇ ಕಾಂಗ್ರೆಸ್ಸಿನಲ್ಲಿ ಇನ್ನೂ ಶಕ್ತಿ ಸ್ಥೈರ್ಯಗಳುಳಿದಿವೆಯೆಂದೂ ತೋರಿಸುವ ಸುಚಿನ್ನವಾಗಿದೆ. ಅರುವತ್ತಾರು ವರ್ಷದ ಕಾಂಗ್ರೆಸ್ ಅನೇಕ ಪರಿವರ್ತನೆ ಬದಲಾವಣೆಗೀಡಾಗಿದೆ. ಈ ಬದಲಾವಣೆಗಳಲ್ಲಿ ಅಧರ ಕಾರ್ಯಕರ್ತರಿಗೇ ತೀರಾ ಧೃಂಸುಮಂತಹ ಯಶಸನ್ನು ಪಡೆವ ಬದಲಾವಣೆಯೇ ಅತಿ ಗಂಡಾಂತರಕಾರಿಯೂ ಪುಟಾಗಿದೆ. ಕಾಂಗ್ರೆಸ್ಸು ಅಧಿಕಾರ ಸ್ಥೀಕರಿಸಿದ ನಂತರ ಉಂಟಾದ ಘಟನೆಗಳು ನಮ್ಮ ಈ ಅಂಜಿಕೆ ಮತ್ತು ಈ ತಿಳುವಳಿಕೆಗಳು ಅರ್ಥವಿಲ್ಲದಲ್ಲವೆಂದು ತೋರಿಸಿವೆಯಲ್ಲದೆ, ಅದರಲ್ಲಿ ಮಹತ್ವದ ತತ್ಯವೂ ಇದೆ. ಇದೀಗ ಕಾಂಗ್ರೆಸ್ಸಿನ ಅಚಲ ಮತ್ತು ಸ್ಪಷ್ಟ ನಿಲುವೆಯಿಂದ, ನಾವಾವ ಮಾರ್ಗವಪತ್ಥ ನೋಡಬೇಕಾಗಿದೆ. ಮತ್ತು ಯಾವ ಮಾರ್ಗವಪತ್ಥ ಸಾಗಬೇಕಾಗಿದೆ ಎಂಬುದನ್ನು ನಿರ್ಧರಿಸಬೇಕಾಗಿದೆ" ಎಂದು ಹೇಳಿದರು.

ಸ್ಮರಣೆ

ಶ್ರೀ ನೆಹರೂರವರು ತಮ್ಮ ಭಾಷಣದಲ್ಲಿ ದಿ|| ಪಲ್ಲಭಭಾಯಿಯವರ ಬಗ್ಗೆ ಮನೋವೇಧಕ ರೀತಿಯಲ್ಲಿ ಹೇಳಿ "ಅವರ ಸ್ಮರಣೆಯು ನಮಗೆ ಯುಗ ಯುಗಾಂತರದ ವರೆಗೂ ಶಕ್ತಿ ಮತ್ತು ಸ್ಫೂರ್ತಿಯನ್ನು ಕೊಡುವಂಥದ್ದಾಗಿದೆ" ಯೆಂದು ಹೇಳಿದರು.

ಶ್ರೀ ನೆಹರೂರವರು ಗಾಂಧೀಜಿಯವರ ಬಗ್ಗೆ ಮಾತನಾಡುತ್ತ "ಅವರು ಶಸ್ತ್ರಗಳಿಗೆ ಅಭಯವು ಅಹಿಂಸೆಗಳನ್ನು ಕಲಿಸಿದ ಗುರು. ಅವರು ಭಾರತವು ಯಾವ ತತ್ವದ ಮೇಲೆ ನಿಂತಿದೆ ಮತ್ತು ಅದರ ಜಲಾಖಲವನ್ನು ಚೆನ್ನಾಗಿ ಅರಿತಿದ್ದರು. ಅದಕ್ಕಾಗಿ ಅವರ ಜೀವನವು ರಾಜಕೀಯ ಸ್ವಾತಂತ್ರ್ಯವಿಲ್ಲದೆ ರಸಾತಳಕ್ಕೆ ತುಳಿಯಲ್ಪಟ್ಟ ಮತ್ತು ಸಂಕಷ್ಟಗಳಿಂದ ನರಳುವ ಜನತೆಯ ಉದ್ಧಾರಕ್ಕಾಗಿಯೇ ವಿನಿಯೋಗವಾಗಿದ್ದಿತು. ಅವರು ಈ ಜನತೆಯ ಮತ್ತು ನಮ್ಮ ವಿಚಿತ್ರಾಲೋಕದ ವಿಮೋಚನಾ ಶಕ್ತಿಯಾಗಿ ಪರಿಣಮಿಸಿದರು" ಎಂದು ಹೇಳಿದರು.

ಶ್ರೀ ನೆಹರೂರವರು ಅನೇಕ ವಿಷಯುಗಳ ಬಗ್ಗೆ ತಮ್ಮ ಭಾಷಣದಲ್ಲಿ ನಿರೂಪಿಸಿದ್ದಾರೆ. ಅದರ ಸಂಕ್ಷಿಪ್ತ ವಿವರವು ಈ ಕೆಳಗಿನಂತಿದೆ.

ವಿದೇಶ ಧೋರಣೆ

"ಭಾರತವು ವಿದೇಶೀ ರಾಜಕಾರಣದ ಧುರೀಣತ್ವಕ್ಕೆ ಇಳಿದೀತೆಂಬ ತಿಳುವಳಿಕೆಯು ಪೂರ್ತಿಯಾಗಿ ತಪ್ಪು ತಿಳುವಳಿಕೆಯಾಗಿದೆ. ತಮ್ಮ ಸಮಸ್ಯೆಗಳಲ್ಲಿ ಹೊರಗಿನ ಕೈ ಮಧ್ಯ ಪ್ರವೇಶದೆಂಬ ಇಚ್ಛೆ ಇಷ್ಟಂತೆ ನಾವು ಹೊರಗಿನ ಯಾವುದೇ ರಾಷ್ಟ್ರದ ವಿಷಯುಗಳಲ್ಲಿ ಕೈ ಹಾಕಲೂ ಬಯಸುತ್ತಿಲ್ಲ. ಆಪರೆ ಸಹಕಾರವನ್ನು ಬಯಸುತ್ತೇವೆ. ಮತ್ತು ಯಾವುದೇ ಸಮಸ್ಯೆಯ ಪರಿಪೂರ್ಣತೆಯು ದೃಷ್ಟಿಯಿಂದ ಶಕ್ಯವಾದ ರೀತಿಯಲ್ಲಿ ನಮ್ಮ ಸಹಾಯವನ್ನು ಕೊಡುತ್ತೇವೆ. "ಭಾರತವು ಕಟ್ಟಕ್ಕ ಅಹಿಂಸಾ ಕ್ರಿಯಾವಿಹೀನ ರಾಷ್ಟ್ರವೆಂದು ಹೇಳುವುದು ಶುದ್ಧವಾದ ತಪ್ಪು. ಜಗತ್ತನ್ನು ಬದಲಾಯಿಸುವಲ್ಲಿ ನಾವು ಬಹಳಷ್ಟು ಮಾಡಲಾರೆವೆಂಬುದನ್ನು ತಿಳಿಯುವಷ್ಟು ನಾವು ವಿನಯರಾಗಿದ್ದೇವೆ. ಆದರೆ ಜಾಗತಿಕ ಸಮಸ್ಯೆಗಳನ್ನು ಬಿಡಿಸುವಲ್ಲಿ ನಮ್ಮಲ್ಲಿ ನಿಶ್ಚಯವಾದ ಮತ್ತು ಕೇರವಾದ ವಿಧಾನವಿದೆ. ನಾವು ಅದನ್ನು ಬಿಟ್ಟು ತಡೆದಲ್ಲಿ, ನಾವು ನಮ್ಮಲ್ಲೇ ಗೊಂದಲಿಸಿಕೊಂಡಂತಾದೀತು. ಯಾವುದೇ ಹೆಸರಲ್ಲಿ ಯಾವದೇ ರೂಪದಲ್ಲಿ ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರದ ಮೇಲೆ ಹೇರುವ ನಿಯಂತ್ರಣವು ಅಹಿತವಾದುದು. ಮತ್ತು ಜಾಗತಿಕ ಶಾಂತಿಗೆ ಗಂಡಾಂತರ ಪ್ರಾಯುವಾದುದೆಂಬುದನ್ನೂ ನಾವು ಮನಗಂಡಿದ್ದೇವೆ. ವರ್ಣ ವಿಷಮತೆಯು ವಿಸ್ತರಣೆ ಮತ್ತು ಅದನ್ನು ರೂಢಿಯಲ್ಲಿ ತರುವುದು ವಿನಾಶಕರವಾದುದೆಂಬುದನ್ನೂ ಪ್ರಜಾಸತ್ತೆಯ ಮೂಲಭೂತ ತತ್ವಗಳಿಗೆ ಅವಿರೋಧವಾದುದೆಂಬುದನ್ನೂ ನಾವು ಮನಗಂಡಿದ್ದೇವೆ. ಜಗತ್ತಿನ ಇಬ್ಬು ಭಾಗಗಳು ಇನ್ನೂ ಅನಭಿವೃದ್ಧಿ ಸ್ಥಿತಿಯಲ್ಲಿವೆ ಮತ್ತು ಅವು ಮೂಕವೀಯ ಅಸ್ತಿತ್ವಕ್ಕೆ ಬೇಕಾದ ಪ್ರಥಮ ಅವಶ್ಯಕತೆಗಳ ಅಭಾವಕ್ಕೆ ಶತಾತ್ತಾಗಿವೆ. ಈ ಅಸಮಾನತೆಯನ್ನು ತಿದ್ದಿಕೊಳ್ಳಬೇಕಾಗಿದೆ. ಇಲ್ಲದಿದ್ದರೆ, ಈ ತಿಕ್ಕಾಟಕ್ಕೆ ಒಕಪ್ಪೋಕ ಕಾರಣವಾದೀತು.

ಸಂಯುಕ್ತ ರಾಷ್ಟ್ರ ಸಂಘ

ಇದರ ಕೆಲ ನಿರ್ಣಯಗಳು ಭಾರತಕ್ಕೆ ಅಶ್ಚರ್ಯ ಮತ್ತು ಕಳವಳವನ್ನುಂಟು ಮಾಡಿದ್ದರೂ ನಾವೂ ಅದರೊಂದಿಗೆ ಸಂಬಂಧವಿಟ್ಟುಕೊಂಡಿದ್ದೇವೆ. ಮಾನವ ಜನಾಂಗದ ಅತಿಯೊಡ ಜಾಗತಿಕ ಸರಕಾರದ ವಿಚಾರವೆಂಬ ಹುಳುಗಳಾಕರೂ ಅದರಲ್ಲಿ ಇನ್ನೂ ಇವೆಯೆಂಬುದನ್ನು ನಾವು ಸಂಜಾತ್ತೇವೆ.

ಆದರೆ ಸ. ರಾ. ಸಂಘದ ಸಂಸ್ಥಾಪಕರು ಅಶಿಸಿದುದನ್ನು ಅದು ಕೃತಿಯಲ್ಲಿ ತಂದಿಲ್ಲ. ಇಡೊಂದು ಜಾಗತಿಕ ಸಂಸ್ಥೆಯೆಂದು ತಿಳಿಯಲ್ಪಟ್ಟದ್ದಿತು. ಆದರೆ ಈಗದು ಆ ತಿಳುವಳಿಕೆಯಿಂದ ಕೆಳಕ್ಕಿಳಿದಿದೆ. ಅದೀಗ ಜಗತ್ತಿನ ಒಂದು ಭಾಗವನ್ನು ಪ್ರತಿನಿಧಿಸುವಂತಾಗಿದೆ. ಇದು ಶಾಂತಿಯ ಮಹಾ ಸಾಧಕವಾಗಿದ್ದರೂ ಅಲ್ಲದ್ದನ್ನು ನಿರೂಪಿಸಲು ಇದು ಮೂರ್ಖ ಮಹಾಪತ್ಥ.

ಆದ್ದರಿಂದ ಈ ಪ್ರಶ್ನೆಯನ್ನು ಅತಿದೆ. ಯಾದ ಮಹತ್ವ ಕೊಟ್ಟು ಗಮನಿಸಬೇಕಾಗಿದೆ. ಸಾಧ್ಯವಾದರೆ ಹೊಸತಳಹದಿಯ ಮೇಲೆ, ರಾಷ್ಟ್ರ ಸಂಘವನ್ನು ಪುನರ್ಘಟಿಸುವ ವಿಚಾರಪನ್ನು ಮಾಡಬೇಕಾಗಿದೆ. ಈ ಬದಲಾವಣೆಗೆ ನಾವು ನಮ್ಮ ಹಿಂದಿನ ದಿನಗಳನ್ನು ಮತ್ತು ತಾವ್ಯಪಟವನ್ನು ಗಮನಿಸಿ ಅವಕ್ಕೆ ವಿಶಾಲವಾದ ಶೋಟವನ್ನು ಬೀರಿ ಸತ್ಯಸ್ಥಿತಿಯ ಮತ್ತು ವಸ್ತುಸ್ಥಿತಿಯ ಅರಿವನ್ನು ಅವಕ್ಕೆ ತುಂಬಬೇಕಾಗಿದೆ".

ಪಾಕಿಸ್ತಾನ.

'ಪಾಕಿಸ್ತಾನದ ಆಂತರಿಕ ಪರಿಸ್ಥಿತಿಯಲ್ಲಿ ಕೈಹಾಕುವುದು ನಮಗೆ ಬೇಡ. ಅ

(ಅನೇ ಪುಠಕ್ಕೆ ಸಾಗಿದೆ)

ಚುನಾವಣೆ ಮತ್ತು ರೈತರ ಕರ್ತವ್ಯ.

[ಲೇ:—ಶ್ರೀ ಮುಲಹಾಲ್ ಮೂದಪ್ಪನವರು]

'ಚುನಾವಣೆ' ಅಥವಾ, 'ಎಲೆಕ್ಷನ್' ಈ ಪದಗಳ ಶಬ್ದಾರ್ಥ ರೈತರೆಲ್ಲರಿಗೂ ತಿಳಿಯದಿದ್ದರೂ ಪದಗಳು ಹೊಸವೇನಲ್ಲ. ಈಗ ೨೫ ವರ್ಷಗಳಿಂದಲೂ ಚುನಾವಣೆಯ ವಿಷಯವಾಗಿ ಸ್ವಲ್ಪ ಮಟ್ಟಿಗಾದರೂ ಜನ ಈ ಪರಿಶ್ರಮ ಹೊಂದಿದವರಾಗಿದ್ದಾರೆ. ಈ ಪರಿಶ್ರಮ ಎಷ್ಟರಮಟ್ಟಿಗೆ ಎಂಬ ವಿಚಾರವನ್ನು ತಿಳಿಯಲು ಸ್ವಲ್ಪ ಹಳ್ಳಿಗಾಡಿನಲ್ಲಿ ರೈತರ ಒಡಗೂಡಿ ಆಡಿ ನೋಡಿದರೆ ತಿಳಿಯುವುದು. ಅವರ ಎಲೆಕ್ಷನ್ ಪರಿಶ್ರಮ ತುಂಬಾ ಶೋಚನೀಯವಾದುದೇ ಸರಿ. ಇಪ್ಪತ್ತನೇ ಶತಮಾನದ ಪ್ರಜಾಪ್ರಭುತ್ವ ಸಚಿತೂಗಿಸಿಕೊಂಡು ನಡೆಯಬೇಕಾದರೆ ತಿಳಿವಳಿಕೆಯಿಂದ ಕೂಡಿದ ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳಿಂದ ದೇಶದ ಆಡಳಿತ ನಡೆದರೇನೆ ಆ ದೇಶ ಆನೈಕ್ಯತೆ, ಅರಾಜಕತೆಯಿಂದ ರಹಿತವಾದ ದೇಶವಾಗಿ ಬಾಳಬಹುದೇ ಹೊರತು ತಿಳುವಳಿಕೆಯಿಲ್ಲದ ಜನರ ದೇಶದಲ್ಲಿ ಪ್ರಜಾಪ್ರಭುತ್ವಕ್ಕೆ ಧಕ್ಕೆ ಬರಲು ಹೆಚ್ಚಿನ ಅವಕಾಶ ಮತ್ತು ಶಾಂತಿ ಭಂಗವಾಗಲು ಕಾರಣವಾಗುವುದು. ಸರಿ. ಆದುದರಿಂದ ನಮ್ಮ ದೇಶದಲ್ಲಿ ಈಗ ಎಲೆಕ್ಷನ್ ವಿಚಾರವಾಗಿ ಒಂದು ದೊಡ್ಡ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪುರಸ್ಕಾರ ಮತ್ತು ಪ್ರೋತ್ಸಾಹ ಕೊಡಬೇಕಾಗಿದೆ.

ಮುಂಚುವರಿದ ಮತ್ತು ನಾಲ್ಕು ವರ್ಷಗಳ ಹಿಂದೆ ನಮ್ಮನ್ನು ಆಳುತ್ತಿದ್ದ ದೇಶವಾದ ಇಂಗ್ಲೆಂಡಿನಲ್ಲಿ ಆ ದೇಶದ ಜನರು ಎಷ್ಟೇ ಶಾಲಾ ಕಾಲೇಜಿನ ವಿದ್ಯಾವಂತರಾದರೂ ಅದು ಸಾಲದೆಂದು ಎಲೆಕ್ಷನ್ ವಿದ್ಯಾಭ್ಯಾಸ ಅವಶ್ಯಕವೆಂದು ಅರಿತು ಬರ್ನಾರ್ಡ್ ಷಾ ಮುಂತಾದ ಮಹನೀಯರು ಸಂಘಗಳನ್ನು ಏರ್ಪಡಿಸಿಕೊಂಡು ಜನಗಳಿಗೆ ತಿಳುವಳಿಕೆಕೊಟ್ಟು ದೇಶದ ಮೇಲ್ಮೆಗೆ ಕಾರಣರಾದರು. ಅಂಥ ಸಂಘಗಳು ಈಗ ನಮ್ಮ ದೇಶದಲ್ಲಿ ಉದ್ಭವಿಸಿ, ಜನತೆಗೆ ಅವಶ್ಯವಾದ ಜ್ಞಾನವನ್ನು ಕೊಟ್ಟು ದೇಶವು ಸರಿಯೂದ ಮಾರ್ಗದಲ್ಲಿ ಹೋಗುವುದಕ್ಕೆ ಅವಕಾಶ ಕಲ್ಪಿಸಬೇಕು, ಈ ಸತ್ ಕೆಲಸದಲ್ಲಿ ಭಾಗಿಯಾಗುವವರು ಸತ್ಪುರುಷರು, ಪ್ರಮಾಣಿಕರು ವಿಜ್ಞಾನಿಗಳು, ದೂರದರ್ಶಕರು ಆಗಿರಬೇಕು. ವ್ಯಾಪಾರಗಾರರಂತೆ ಅಥವಾ ರಾಜಕೀಯ ಪಟ್ಟುಗಳಂತೆ ಯಾವ ಒಂದು ಲಾಭ ಅಪೇಕ್ಷೆ ಇಲ್ಲದೆ ದೇಶದ ಆಗುಹೋಗುಗಳನ್ನು ಮತ್ತು ಯಾವುದೇ ಒಂದು ಪರಿಸ್ಥಿತಿಯು ಒದಗಿದಾಗ ಅದನ್ನು ನಿವಾರಿಸುವ ಬಗೆಯನ್ನು ವಿಜ್ಞಾನಿಗಳಂತೆ ಕಂಡುಹಿಡಿದು ಜನಗಳಿಗೆ ತಿಳಿಯುಪಡಿಸುವಂತವರಾಗಬೇಕು. ಹೀಗೆ ಬಂದ ಮಹಾ ಪುರುಷರ ಮೂತಿಗೆ ಪುರಸ್ಕಾರ ಅಥವಾ ಗೌರವ ಕೊಡುವುದು ಪ್ರತಿಯೊಬ್ಬ ಪ್ರಜೆಯ ಪ್ರಥಮ ಕರ್ತವ್ಯ.

ಚುನಾವಣೆ ಎಂಥದೇನು?

ಈ ಶಬ್ದದ ಸರಿಯೂದ ಅರ್ಥವಾಗಬೇಕಾದರೆ ಈ ಪದ ಯಾವ ಸನ್ನಿವೇಶಕ್ಕೆ ಬಂದಿತು ಎಂಬ ವಿಚಾರವನ್ನು ತಿಳಿದರೆ ಅದರ ಶಬ್ದಕೋಶ ಅರ್ಥವು ತಿಳಿಯುವುದು. ದೇಶ, ದೇಶಕ್ಕೆ ಒಬ್ಬ ರಾಜ, ರಾಜನ ಅಧೀನದಲ್ಲಿ ಒಂದು ಸರಕಾರ, ಈ ಸರಕಾರದ ಆಡಳಿತಕ್ಕೆ ಒಳಪಟ್ಟ ಪ್ರಜೆಗಳು ಎಂಬ ವಿಚಾರ ಪ್ರತಿಯೊಬ್ಬನಿಗೂ ತಿಳಿದ ವಿಷಯ. ಈ ಬಗೆಯ ಆಡಳಿತ ಬಹುಕಾಲದಿಂದಲೂ ನಡೆದುಕೊಂಡು ಬಂದುದು. ಇಂದು ಆಡಳಿತಪಕ್ಷದಲ್ಲಿ ರಾಜನ ಜ್ಞಾನ ಅಜ್ಞಾನದಂತೆ ರಾಜಕತೆ ಮತ್ತು ಅರಾಜಕತೆ ದೇಶದಲ್ಲಿ ಆಗಿಂದಾಗ್ಗೆ ನಡೆದಿದೆ. ಆದರೆ ವಿಷಯಲೋಲುಪತೆಗಳಿಗೆ ಒಳಪಟ್ಟ ಈ ಪ್ರಪಂಚದಲ್ಲಿ ಅಜ್ಞಾನವೇ ಜಾಸ್ತಿಯಾದಾಗ ಜನಗಳು ಅತ್ಯಂತ ಕಷ್ಟನಷ್ಟಗಳಿಗೆ ಒಳಪಟ್ಟು ತಡೆಯಲಾರದೆ ರಾಜನ ಮತ್ತು ಸರಕಾರದ ಮೇಲೆ ಹಂಗೆ ಎದ್ದು ತನ್ಮಿತ್ತಿಸಿ ಸತ್ಪ್ರಜೆಗಳ ಅಲ್ಪಿಕೆಗೆ ಒಳಪಟ್ಟು ಪ್ರಜಾ ಸರಕಾರ ಅಥವಾ ಪ್ರಜಾ ಪ್ರಭುತ್ವವೆಂದುಕರೆದುಕೊಂಡರು. ಅಂತಹ ಸತ್ಪ್ರಜೆಗಳನ್ನು ಅಥವಾ ಪ್ರತಿನಿಧಿಗಳನ್ನು ಆರಿಸುವುದಕ್ಕೆ ಎಲೆಕ್ಷನ್ ಅಥವಾ ಚುನಾವಣೆ ಎಂದು ಹೆಸರು.

ಈ ಚುನಾವಣೆ ಎನ್ನುವ ಪದಕ್ಕೆ ಇನ್ನೊಂದು ಅರ್ಥವುಂಟು. ಈ ಅರ್ಥ ಮೊದಲನೆಯ ಅರ್ಥದೊಂದಿಗೆ ಹೊಂದಿಕೊಂಡಿದೆ. ಹೇಗೆಂದರೆ ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಬೇಕು. ಚುನಾಯಿಸುವಾಗ ತಾನು ಆರಿಸುವ ಪ್ರತಿನಿಧಿ ನಿಜವಾಗಿ ಸತ್ಯವಂತನೇ ಮತ್ತು ಆವನು ಪಡೆಯುವ ನುಡಿಯುವ ಮಾರ್ಗ ಸರಿಯೋ ಅಥವಾ ತಪ್ಪೋ ಎನ್ನುವ ಅರಿವಾಗಬೇಕು. ಈ ಅರಿವು ಆಗಬೇಕಾದರೆ ಇದು ಸರಿ, ತಪ್ಪು ಎಂದು ಇತ್ಯರ್ಥ ಮಾಡುವ ಶಕ್ತಿ ಬೇಕು. ಇದಕ್ಕೇನೇ ಪ್ರತಿಯೊಬ್ಬರೂ ತನ್ನ ಕರ್ತವ್ಯವೇನು? ತನಗೂ ಪರರಿಗೂ ಇರುವ ಸಂಬಂಧವೇನು? ಮತ್ತು ತನ್ನ ದೇಶಕ್ಕೆ ತನ್ನ ಕರ್ತವ್ಯವೇನು? ಎಂಬುದನ್ನು ತಿಳಿಯುವುದಕ್ಕೆ ಎಲೆಕ್ಷನ್ ಅಥವಾ ಚುನಾವಣೆ ಎಂದು ಕರೆದುದು. ಒಟ್ಟಿನಲ್ಲಿ ಹೇಳುವುದಾದರೆ ತನ್ನ ಅರಿವು ತನಗಾಗಬೇಕು. ಇದಕ್ಕಾಗಿಯೇ ಈಗ ಮುವ್ವತ್ತು ವರ್ಷಗಳಿಂದಲೂ ಮಹಾತ್ಮ ಗಾಂಧಿಜೀಯವರಂತಹ ಮಹಾಪುರುಷರು ಸತತವಾಗಿ ದುಡಿದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಗಳಿಸಿಕೊಟ್ಟರು. ಈ ಸ್ವಾತಂತ್ರ್ಯ ಅಥವಾ ಸ್ವರಾಜ್ಯ ಶಾಶ್ವತವಾಗಬೇಕಾದರೆ ಪ್ರತಿಯೊಬ್ಬ ಪುನುಷ್ಯನೂ ಈ ಎಲೆಕ್ಷನ್ ಎಂಬ ಪದದ ಅರ್ಥವನ್ನು ತಿಳಿದವನಾಗಬೇಕು. ಇಲ್ಲದಿದ್ದರೆ ಸ್ವರಾಜ್ಯ ಕ್ಷಣಿಕವಾದುದು.

ರಾಜಕೀಯತೆ.

ಹಾಗಾದರೆ ಪ್ರತಿಯೊಬ್ಬ ಪ್ರಜೆಯೂ ರಾಜನಾಗಬೇಕಾದರೆ ಪ್ರತಿ ಪ್ರಜೆಯಲ್ಲಿಯೂ ರಾಜಗುಣವಿರಬೇಕು ಆ ರಾಜಗುಣವೇನು? ಮರ್ಯಾದೆ, ಮೌನ, ಗಂಭೀರ ಈ ಗುಣಗಳಿಗೆ ಒಳಪಟ್ಟವನಾಗಬೇಕು. ಈ ಗುಣಗಳು ಪುನುಷ್ಯನಲ್ಲಿ ಉದ್ಭವಿಸಬೇಕಾದರೆ ತನ್ನ ಜೀವಸಪನ್ನು ನಿಶ್ಚಯಿಸುವ ಶಕ್ತಿ ಬೇಕು. ಅಂದರೆ ಯಾವನೊಬ್ಬನೂ ಪ್ರಜೆಗೆ ಅನ್ಯಾಯ ಮಾಡದಂತೆ ದುಡಿಮೆ ಮಾಡುವನೋ, ಅವನಿಗೆ ಈ ಗುಣಗಳು ಸಾಧ್ಯ. ಇಲ್ಲದಿದ್ದರೆ ಅವನು ಇನ್ನೊಬ್ಬನ ಅಧೀನದಲ್ಲೂ, ಸಂಕಟದಿಂದಲೂ ಬಾಳಬೇಕಾಗುವುದು. ಇಂಥ ಬಾಳೇ ಅಸತ್ಯ ಬಾಳು ಎಂದು ಕರೆಯುವುದು. ಮತ್ತು ಇಂತಹ ಅಸತ್ಯದಿಂದಲೇ ದೇಶದಲ್ಲಿ ಅಶಾಂತಿ ಉಂಟಾಗುವುದು. ಸತ್ಯವಂತರು ಬಾಳಬೇಕಾದರೆ ಅಂತರಿ ಶಾಂತಿ ಇರಬೇಕಾದರೆ ಈ ಅಸತ್ಯವಂತರು ನಿರ್ಮೂಲವಾಗಬೇಕು. ಇದಕ್ಕೆ ಸಮೂಜದ 'ಕೊಳಕು' ಅಥವ 'ಕೊಚ್ಚೆ' ಎಂದು ಕರೆಯುವುದು. ಈ ಸಮೂಜದ ಕೊಳಕನ್ನು ಹೋಗಲಾಡಿಸದಿದ್ದಕೆ ಸಾಂಕ್ರಾಮಿಕ ರೋಗ ಶಾಶ್ವತ. ಅಂಥ ರೋಗ ಇದ್ದರೆ ಅದನ್ನು ನಿವಾರಿಸಲು ಡಾಕ್ಟರಂತೆ ಖಾಯಿಲೆಗಳಿಗೆ ತಕ್ಕಂತಹ ಔಷಧಿಯನ್ನು ವಿಜ್ಞಾನಿಗಳಿಂದ ಕಂಡುಹಿಡಿಯಿಸಿ ನಿವಾರಿಸಬೇಕು. ಅಂತಹ ವಿಜ್ಞಾನಿಗಳನ್ನು ಡಾಕ್ಟರುಗಳನ್ನು ಪ್ರಜೆಗಳು ಚುನಾಯಿಸಬೇಕು. ಇದು ಎರಡನೇ ಕರ್ತವ್ಯ.

ಸಮೂಜದ ನಿರ್ಮೂಲೀಕರಣ.

ಸಮೂಜದ 'ಕೊಚ್ಚೆ' ಒಂದು ರೀತಿಯದಲ್ಲ. ಅದು ರಾಜಕೀಯದಲ್ಲೂ ಕಾಣಿಸಬಲ್ಲದು. ಹೇಗೆಂದರೆ ವ್ಯಾಪಾರಗಾರರು ಹೇಗೆ ತಮ್ಮ ಲಾಭಕ್ಕಾಗಿ ಚಿಂತಿಸುವರೋ ಹಾಗೆ ರಾಜಕೀಯದಲ್ಲಿಯೂ ಸ್ವಾರ್ಥತೆಗಾಗಿ ಚಿಂತಿಸುವರು. ಹೀಗೆ ಚಿಂತಿಸುವವರಲ್ಲಿ ನಾನಾ ಬಗೆಯುಂಟು. ಕೆಲವರು ತಮ್ಮ ಹೊಟ್ಟೆಪಾಡಿಗಾಗಿ, ಹಲವರು ದ್ರವ್ಯ ಸಂಪಾದನೆಗಾಗಿ, ಇನ್ನು ಕೆಲವರು ಅಧಿಕಾರಲಾಲಸೆಯಿಂದ ರಾಜಕೀಯ ರಂಗಕ್ಕೆ ಇಳಿಯುವುದುಂಟು. ಈ ಸ್ವಾರ್ಥಿಗಳಿಂದ ಬರುವ ರೋಗ ಬಹಳ ಕೆಟ್ಟದ್ದು. ಇಂಥ ರಾಜಕೀಯ 'ಕೊಚ್ಚೆ'ಗಳನ್ನು ಬಹಳ ಜಾಗರೂಕತೆಯಿಂದ ನಿವಾರಿಸಬೇಕು. ಈ ಸ್ವಾರ್ಥಿಗಳು ತಮ್ಮ ಸ್ವಾರ್ಥಸಾಧನೆಗೆ ಯಾವ ಮಾರ್ಗವನ್ನಾದರೂ ಹಿಡಿಯಬಲ್ಲರು. ಇಂಥವರಿಂದಲೇ ಸಮೂಜದ ಕೊಚ್ಚೆ ಉಂಟಾಗುವುದು.

ಈ ರಾಜಕೀಯ 'ಕೊಚ್ಚೆ'ಯನ್ನು ನಿವಾರಿಸುವುದೇ ಓಟುದಾರರ ಮೂರನೆ ಕರ್ತವ್ಯ. ಅಂದರೆ ಪ್ರಮಾಣಿಕರನ್ನು, ವಿಜ್ಞಾನಿಗಳನ್ನು ದೂರದರ್ಶಿಗಳನ್ನು ಆರಿಸತಕ್ಕದ್ದು.

ಇಷ್ಟು ಮಾತ್ರದಿಂದಲೇ ದೇಶದಲ್ಲಿ ಶಾಂತಿ ಲಭಿಸಲಾರದು. ಪ್ರಕೃತಿಯು ಅಥವಾ ದೈವವು ಮಾನವನಿಗೆ ಅಶಾಂತಿಗೆ ಕಾರಣವಾದ ರೋಗಾದಿಗಳನ್ನು ತಂದೊಡ್ಡುವುದು. ಇಂಥ ರೋಗಾದಿಗಳ ನಿವಾರಣೋಪಾಯಗಳನ್ನು ತಿಳಿದುಕೊಳ್ಳುವುದು ಮತ್ತು ಬೇಕಾಗುವ ಸಲಕರಣೆಗಳನ್ನು ಒದಗಿಸಿಕೊಳ್ಳುವುದಕ್ಕೆ ತಕ್ಕ ಏರ್ಪಾಡು ಮಾಡಿಕೊಳ್ಳಬೇಕು. ಇದು ಸಾಮೂಹಿಕ ಕೆಲಸವಾದುದರಿಂದ ರಾಜಕೀಯದಲ್ಲಿ ಹೆಚ್ಚಿನ ಪ್ರಾಮುಖ್ಯತೆಯಿಂಟು. ರೈತರು ಈ ಕಡೆ ಹೆಚ್ಚು ಗಮನ ಕೊಡಬೇಕು. ತಮ್ಮ ಕಸುಬೇ ಪ್ರಕೃತಿಯೊಂದಿಗೆ ಹೊಡೆದಾಡುವ ಕೆಲಸವಾಗಿದೆ. ಮತ್ತು ರೈತನು ದಿನದಲ್ಲಿ ಬಹಳ ಕಾಲ ತನ್ನ ಕಾಲವನ್ನು ಹೊರಗಡೆ ಹುಳಿ, ಬಿಸಿಲು ಮುಂತಾದುವುಗಳಲ್ಲಿ ಕಳೆಯುವುದರಿಂದ ಅವನು ರೋಗಗಳಿಗೆ ಹೆಚ್ಚಾಗಿ ಈಡಾಗುವನು. ಈ ರೋಗಗಳನ್ನು ಸಕಾಲದಲ್ಲಿ ನಿವಾರಿಸಿಕೊಳ್ಳದಿದ್ದರೆ, ಹೆಚ್ಚಿನ ಕಷ್ಟಕ್ಕೆ ಈಡಾಗಬೇಕಾಗುವುದು. ಆದುದರಿಂದ ಗ್ರಾಮ ನೈರ್ಮಲ್ಯ ಮುಂತಾದ ವಿಷಯಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವ ಜನರನ್ನು ಆರಿಸಬೇಕು.

ಆರ್ಥಿಕ ವಿಚಾರ.

ಇವೆಲ್ಲಕ್ಕೂ ಹೆಚ್ಚಿನದಾದ ಕರ್ತವ್ಯ ಒಂದುಂಟು. ಅದು ದುಡಿಮೆಯ ಜ್ಞಾನ. ರೈತರೆಲ್ಲರಿಗೂ ಒಂದೇ ದುಡಿಮೆ. ಅದು ವ್ಯವಸಾಯದ ಪುರೋಭಿವೃದ್ಧಿಯೇ ರೈತನ ಏಳಿಗೆಗೆ ಸಹಾಯಕ. ವ್ಯವಸಾಯ ಹೇಗಿರಬೇಕು, ವ್ಯವಸಾಯದಲ್ಲಿ ತಿಳಿದಿರುವ ಜ್ಞಾನವೇನು ಅದನ್ನು ಯಾವ ರೀತಿ ಪುನರ್ವ್ಯವಸ್ಥಿಸಬೇಕು, ಹೀಗೆ ವ್ಯವಸ್ಥೆಯಾದ ವ್ಯವಸಾಯದಿಂದ ರೈತನ ಏಳಿಗೆ ಎಷ್ಟರ ಮಟ್ಟಿಗೆ ಆಗುವುದು ಎಂಬ ವಿಚಾರವನ್ನು ತಿಳಿಯಬೇಕು.

ಇಂದು ರೈತ ಅತಿ ಮುಖ್ಯ ವಿಚಾರವನ್ನು ಬಗೆಹರಿಸಬೇಕಾಗಿದೆ. ಅನ್ನದಾತ ರೈತನಿಗೆ ಅನ್ನವಿಲ್ಲದ ದೇಶ ದೇಶವಲ್ಲ. ನಮ್ಮ ದೇಶದಿಂದ ಪ್ರತಿವರ್ಷವೂ ಅನ್ಯದೇಶಕ್ಕೆ ಆಹಾರಕ್ಕಾಗಿ ದೇಶದ ಆದಾಯದ ಮುಕ್ಕಾಲು ದುಡ್ಡು ವೀಸೆ ಹೊರದೇಶಕ್ಕೆ ಕಳುಹಿಸಬೇಕಾಗಿದೆ. ಹೀಗೆ ವ್ಯಯವಾಗುವ ಹಣ ನಿಂತು ದೇಶದಲ್ಲಿ ಸದುಪಯೋಗವಾದರೆ ಎಷ್ಟೇ ಅನುಕೂಲ. ಈ ಅನರ್ಥವನ್ನು ತಪ್ಪಿಸುವುದಕ್ಕೋಸ್ಕರ ನಮ್ಮ ದೇಶದ ಈಗಿನ ಸರಕಾರ ಈ ನಾಲ್ಕು ವರ್ಷಗಳಿಂದಲೂ ಸತತ ಪ್ರಯತ್ನಪಟ್ಟರೂ ಆಹಾರದಲ್ಲಿ ಸ್ವಯಂ ಪರಿಪೂರ್ಣತೆಯನ್ನು ಹೊಂದಲು ಆಗಲಿಲ್ಲ. ಸರಕಾರದವರು ಆಗಲೆ ೮೦ ಕೋಟಿ ರೂ. ಗಳನ್ನು ಈ ನಾಲ್ಕು ವರ್ಷಗಳಲ್ಲಿ ಆಹಾರಾಭಿವೃದ್ಧಿಗೆ ಖರ್ಚು ಮಾಡಿದ್ದಾರೆ. ಈ ಹಣವೆಲ್ಲಾ ಸುಮ್ಮನೆ ವ್ಯಯವಾಗಿದೆಯೇ ಹೊರತು ಯಾವ ಪ್ರಯೋಜನವೂ ಆಗಿಲ್ಲ. ಆದುದರಿಂದ ಇಂಥ ಅನ್ಯಾಯಗಳು ಅಂದರೆ ಸುಮ್ಮನೆ ವ್ಯಯವಾಗುವುದನ್ನು ಮುಂದೆ ತಪ್ಪಿಸಿಕೊಂಡು ಸರಿಯೂದ ಮಾರ್ಗ ಯಾವುದು ಎಂಬುದನ್ನು ತಿಳಿದು ಅಂಥ ಮಾರ್ಗದಲ್ಲಿ ಹೋಗಬೇಕು. ಈ ಕಾರ್ಯವನ್ನು ಮುಂದಿನ ಚುನಾವಣೆಯಲ್ಲಿ ನಡೆಸಬಹುದು.

ರೈತನ ಅಭಿವೃದ್ಧಿ.

ನಮ್ಮ ರೈತ ಅಭಿವೃದ್ಧಿ ಹೊಂದಲು ಅವಕಾಶವುಂಟು. ಅಂದರೆ ತಾನು ಮುಂದುವರಿಯುವುದಕ್ಕೆ ಇರುವ ಅಡಚಣೆಗಳನ್ನು ದೂರಮಾಡಿಕೊಳ್ಳಬೇಕು. ಇರುವ ಅಡಚಣೆಗಳು ಮನುಷ್ಯ ಪ್ರಯತ್ನಕ್ಕೆ ಮೀರಿದವೇನಲ್ಲ. ಈ ದೇಶದಲ್ಲಿ ವೈರಿ ಬೆಳೆಯಲು ಬೇಕಾದ ಮಳೆ ಸಕಾಲಕ್ಕೆ ಬಾರದೆ ಎಷ್ಟೋ ಅನರ್ಥವುಂಟು. ಆದರೆ ಪ್ರಕೃತಿ ಹೊಳೆಗಳ ತೂಪದಲ್ಲಿ ಬೇಕಾದಷ್ಟು ನೀರನ್ನು ಒದಗಿಸಿದೆ. ಈ ಹೊಳೆಗಳಿಗೆ ಅಣೆಕಟ್ಟುಗಳನ್ನು ಕಟ್ಟಿ, ಕಾಲುವೆಗಳನ್ನು ತೆರುವಿ ನೀರು ಹಾಯಿಸಿಕೊಂಡು ಬೆಳೆಯನ್ನು ಬೆಳೆದರೆ ಆಹಾರಕ್ಕೆ ಎಲ್ಲಿಯ ಅಭಾವ? ಈ ವಿಷಯದಲ್ಲಿ ಯಾರು ಪ್ರಾಮುಖ್ಯತೆ ಕೊಡುವರೊ ಅಂಥವರನ್ನು ಚುನಾಯಿಸುವುದು ರೈತನ ಕರ್ತವ್ಯ. ಇಲ್ಲಿಗೆ ರೈತನ ಅಭಿವೃದ್ಧಿಯಲ್ಲಿ ಒಂದು ಘಟ್ಟ.

(ಚೇತನಾ.)

ವೀರಾಜಪೇಟೆ ಕೊಡವ ಸಮಾಜ.

ತಾ|| ೩೦-೯-೫೧ರಲ್ಲು ವೀರಾಜಪೇಟೆ ಕೊಡವ ಸಮಾಜದ ವಾರ್ಷಿಕ ಸಭೆ ಮುನಸಿಪಲ್ ಹಾಲಿನಲ್ಲಿ ನಡೆಯಿತು. ಸಮಾಜದ ಪ್ರೆಸಿಡೆಂಟರಾದ ಶ್ರೀ ಕೋದಾಂಡ ನಂಜಪ್ಪನವರು ಅಧ್ಯಕ್ಷರಾಗಿದ್ದರು. ಸದ್ರಿ ದಿನ ಮಳೆಯಾದ್ದರಿಂದ ಆಟಿ ಓಟಗಳ ಏರ್ಪಾಡನ್ನು ಮುಂದರಿಸಿಡಲಾಗಿದೆ ಎಂಬುದನ್ನು ವಿವರಿಸಿದರು. ಪ್ರಾರ್ಥನೆಯಾದ ತರುವಾಯ ಕೆಲವರು ಭಾಷಣ ಮಾಡಿದರು. ಕಾರ್ಯಕಾರಿ ಮಂಡಳಿಯ ನೇಮಕವಾದ ನಂತರ ಠರಾವುಗಳು ಚರ್ಚೆಯಾದಲ್ಲು ಕೊಡಗಿಗೆ ವಲಸ್ತ್ರಿಯುಂಡಲ ಕೊಟ್ಟದಕ್ಕೆ ಸ್ಥಳೀಯ ಮತ್ತು ಇಂಡಿಯಾ ಸರಕಾರವನ್ನು ವಂದಿಸುವಂತೆಯೂ, ಇಂಟರ್‌ನಲ್ ಮೂವೆಂಟ್ ಕಂಟ್ರೋಲ್ ಮತ್ತು ರೇಶನ್ ಪದ್ಧತಿಯನ್ನು ವಜಾ ಮಾಡಬೇಕೆಂದು ಸ್ಥಳೀಯ ಸರಕಾರವನ್ನು ಕೇಳಿಕೊಳ್ಳುವಂತೆಯೂ, ಕೊಡಗಿನಲ್ಲಿ ಬತ್ತದ ಕೃಷಿಯು ಈಗಿನ ವಾತಾವರಣಕ್ಕೆ ಸರಿಯಾಗಿ ಗಾಡಿಗೆ ೨೫೫-೦-೦ ರೂಪಾಯಿ ಮಾಡಬೇಕೆಂದು ಸ್ಥಳೀಯ ಮತ್ತು ಇಂಡಿಯಾ ಸರಕಾರವನ್ನು ಕೇಳಿಕೊಳ್ಳುವಂತೆಯೂ, ಕೊಡಗು ಚೀಫ್ ಕಮಿಷನರು ಇತ್ತೀಚೆಗೆ ಹೊರಡಿಸಿರುವ ಸೆಲೆಕ್ಷನ್ ಉದ್ಯೋಗವನ್ನು ವಜಾಮಾಡಿ ಜಫರ ಸರ್ವಿಸ್ ಮತ್ತು ಯೋಗ್ಯತೆ ಮೇರೆ ಉದ್ಯೋಗ ಕೊಡುವಂತೆ ಸ್ಥಳೀಯ ಸರಕಾರವನ್ನು ಕೇಳಿಕೊಳ್ಳುವಂತೆಯೂ, ಕೊಡಗಿಗೆ ವಿದ್ಯುಚ್ಛಕ್ತಿ ಬೆಳಕು ಬರುವ ವಿಷಯಾಡು ಒಡನೆ ಮಾಡಬೇಕಾಗಿ ಸ್ಥಳೀಯ ಸರಕಾರವನ್ನು ಕೇಳಿಕೊಳ್ಳುವಂತೆಯೂ ಈ ಸಭೆಯು ಸರ್ವ ಸಮ್ಮತದಿಂದ ಠರಾವುಗಳನ್ನು ಪಾಸು ಮಾಡಿತು. ಆಲ್ಲದೆ ವೀರಾಜಪೇಟೆ ಮುನ್ಸಿಪಲಿಟಿಯಲ್ಲು ನೀರಿನ ಸರಬರಾಯಿಯನ್ನೂ ಮತ್ತು ಪುಸ್ತಕ ಭಂಡಾರವನ್ನೂ ಏರ್ಪಡಿಸಬೇಕೆಂದೂ, ವೀರಾಜಪೇಟೆ ಮೂಸಾಗಾಡು ರಸ್ತೆ ತಿರುಗುವ ಸ್ಥಳಕ್ಕೂ ಗೋಣಿಕೊಪ್ಪಲಿಗೆ ತಿರುಗುವ ಸ್ಥಳಕ್ಕೂ ಪಾಯಂ ಆಗಿ ಪೋಲೀಸು ಬೀಟು ಏರ್ಪಾಡು ಮಾಡಲು ಸ್ಥಳೀಯ ಸರ್ಕಾರವನ್ನು ಕೇಳಿಕೊಳ್ಳುವಂತೆಯೂ, ವೀರಾಜಪೇಟೆ ಮುನ್ಸಿಪಲಿಟಿಯೊಳಗೆ ತಂದ ವಾಹನಗಳಿಗೆ ಆಕ್ಟ್ರಾಯಿ ಪಾವತಿ ಮಾಡಿದ ಮೇಲೆ ಬಸ್ಸು ಸ್ಟೇರಿಡಿನಲ್ಲಿ ನಿಲ್ಲುವ ವಾಹನಗಳಿಗೆ ತಲಾ ಫೀಜು ವಸೂಲಿ ಮಾಡುವುದನ್ನು ನಿಲ್ಲಿಸಬೇಕಾಗಿಯೂ ಬಸ್ಸು ಸ್ಟ್ಯಾಂಡು ಹತ್ತಿರ ಮತ್ತು ವೇಯಿಸ್ ಸ್ಟೇಟುಗಳಲ್ಲಿ ರಾತ್ರಿ ದೀಪದ ಏರ್ಪಾಡು ಮಾಡಬೇಕಾಗಿಯೂ ಮುನ್ಸಿಪಾಲಿಟಿ ಅಧಿಕಾರಿಗಳನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು. ಈ ಸಮಾಜಕ್ಕೆ ಆಗುವಷ್ಟು ಬೇಗನೆ ಕಟ್ಟಡವ ಏರ್ಪಾಡು ಮಾಡಬೇಕೆಂದು ತೀರ್ಮಾನಿಸಲಾಯಿತು. ಅಧ್ಯಕ್ಷರ ಭಾಷಣದ ನಂತರ ವಂದನಾರ್ಪಣೆಯಿಂದ ಸಭೆಯು ಬರಕಾಸ್ತಾಯಿತು. ಊಟ ಉಪಚಾರವು ನಡೆಯಿತು.

ವಯಸ್ಕರ ಶಿಕ್ಷಣ.

ಕೊಡಗಿನಲ್ಲಿ ವಯಸ್ಕರ ಶಿಕ್ಷಣವನ್ನು ಪ್ರಚಾರ ಮಾಡುವ ಒಂದು ಯೋಜನೆಯನ್ನು ತಯಾರಿಸಿ ಕೇಂದ್ರ ಸರಕಾರಕ್ಕೆ ಕಳುಹಿಸಿದೆ. ಬಂದ ಕೊಡಲೆ ಈ ದೇಶದಲ್ಲಿಯೂ ಅದನ್ನು ಜಾರಿಗೆ ತರಲಾಗುವುದು.

ಈ ಮಧ್ಯೆ ನವಂಬರ್ ೧೯ನೇ ತಾರೀಕಿನಲ್ಲಿ ಇಡೀ ಹಿಂದೂದೇಶದಲ್ಲಿ 'ಸಮಾಜ ಶಿಕ್ಷಣದ ದಿನ'ವನ್ನಾಚರಿಸಲಾಗುವುದು. ಆ ದಿನ ಕೆಲವು ಸ್ಥಳಗಳಲ್ಲಿ ವಯಸ್ಕರ ಶಿಕ್ಷಣದ ಪ್ರಚಾರ ಕಾರ್ಯವನ್ನು ಕೈಕೊಳ್ಳಲಾಗುವುದು.

ವಯಸ್ಕರ ಶಿಕ್ಷಣದ ಆವಶ್ಯಕತೆಯು ವಿಷಯದಲ್ಲಿ ಯಾವ ದೇಶದಲ್ಲಿಯೂ ಭಿನ್ನಾಭಿಪ್ರಾಯವಿಲ್ಲ. ಸಮಾಜದ ಏಳಿಗೆಗೆ ಆರ್ಥಿಕ ಮತ್ತು ಸಾಮಾಜಿಕ ಉನ್ನತಿಗೆ ತಳಹದಿಯಾಗಿರುವುದು ಶಿಕ್ಷಣವೆಂದು ತಿಳುವಳಿಕೆಯುಳ್ಳ ಜನತೆ. ದಿನ ದಿನಕ್ಕೂ ಬೆಳೆಯುತ್ತಿರುವ ನಾನಾವಿಧವಾದ ಪ್ರಪಂಚದ ಜ್ಞಾನವನ್ನು ಮೆಷಿನ್ ಬ್ಬರಿಂದ ತಿಳಿಯುವುದು ಪ್ರಯಾಸ್ಸಾಧ್ಯವಾದ ಕೆಲಸ. ಆದ್ದರಿಂದ ಪ್ರತಿಯೊಬ್ಬನೂ ವಿದ್ಯಾವಂತನಾದರೆ ತನ್ನ ಮತ್ತು ಸಮಾಜದ ಉನ್ನತಿಗೆ ಬೇಕಾದ ಜ್ಞಾನವನ್ನು ಪುಸ್ತಕಗಳನ್ನು ಮತ್ತು ಪತ್ರಿಕೆಗಳನ್ನು ಓದುವುದರ ಮೂಲಾಂತರ ಪಡೆಯಬಹುತ್ತಾ.

ನಿರಕ್ಷರಸ್ತರನ್ನು ಅಕ್ಷರಸ್ತರನ್ನಾಗಿ ಮಾಡುವ ಈ ದೊಡ್ಡ ಕಾರ್ಯವನ್ನು ಸರಕಾರ ಕೈಕೊಂಡರೂ ದೇಶದ ಸಾಧಾರಕರ, ವಿದ್ಯಾಭಿಮಾನಿಗಳ ಮತ್ತು ಅನೇಕ ಸಂಸ್ಥೆಗಳ ಸಹಾಯ ಮತ್ತು ಸಹಾನುಭೂತಿ ಇಲ್ಲದಿದ್ದರೆ ಈ ಕಾರ್ಯವು ಯಶಸ್ವಿಯಾಗಲಾರದು.

ಇಂದು ನಮ್ಮ ದೇಶದಲ್ಲಿ ಮೂಡಲಿರುವ ರಚನಾತ್ಮಕ ಕೆಲಸಗಳಲ್ಲಿ ಓದುಬರಹ ಬಾರದವರಿಗೆ ವಿದ್ಯಾದಾನ ಮಾಡುವುದೊಂದು ಪವಿತ್ರವಾದ ಕೆಲಸವಾಗಿದೆ.

ಆದ್ದರಿಂದ ಪ್ರತಿ ವಿದ್ಯಾವಂತರೂ ತಮ್ಮ ಬಿಡುವಿನವಯದಲ್ಲಿ ವಿದ್ಯೆ ಇಲ್ಲದವರಿಗೆ ವಿದ್ಯಾದಾನ ಮಾಡಬೇಕೆಂದೂ, ಕೊಡಗು ದೇಶದ ಎಲ್ಲಾ ಮಂತ್ರಾಧಿಪತಿಗಳು ಈ ಕಡೆ ಗಮನಕೊಟ್ಟು ಹಲವರಿಗಾದರೂ ರಾತ್ರಿ ಶಾಲೆಗಳನ್ನೇರ್ಪಡಿಸಿ ವಿದ್ಯೆ ಕಲಿಸುವ ಏರ್ಪಾಡು ಮಾಡುವಂತೆಯೂ, ತೋಟಗಳ ಮತ್ತು ಕಾರ್ಖಾನೆಯ ಮಾಲೀಕರು ತಮ್ಮ ಕೈಕೆಳಗಿರುವ ವಿದ್ಯೆ ಇಲ್ಲದ ಮಜೂರರಿಗೆ ವಿದ್ಯೆಕಲಿಸುವ ಹಂಚಿಕೆಯನ್ನೇರ್ಪಡಿಸುವಂತೆಯೂ 'ಅಖಿಲಭಾರತದ ಸಮಾಜ ಶಿಕ್ಷಣದ ದಿನಾಚರಣೆಯ' ಸಂಬಂಧವಾಗಿ ಸರ್ವರಿಗೂ ವಿದ್ಯಾ ಇಲಾಖೆಯ ಅಧಿಕಾರಿಗಳು ಮನವಿಮಾಡಿಕೊಂಡಿದ್ದಾರೆ. ಜಿಲ್ಲಾ ವಿದ್ಯಾಧಿಕಾರಿ.

ಎರಡನೆಯ ಕ್ಷಯರೋಗ ನಿವಾರಣೆಗೆ ಸಮ್ಬಂಧವಾದ ಸೀಲ್ ಮೂರಾಟದ ಯೋಜನೆ

1951ನೇ ಇಸವಿ ಆಕ್ಟೋಬರ್ 2ನೇ ತಾರೀಕಿನಿಂದ 1952ನೇ ಇಸವಿ ಜನವರಿ 26ನೇ ತಾರೀಕಿನ ವರೆಗೆ.

ವಿ ನ ಂ ತಿ.

ಎರಡನೆಯ ಕ್ಷಯರೋಗ ನಿವಾರಣೆ ಸಮ್ಬಂಧವಾಗಿ ಸೀಲು ಮೂರುವ ಯೋಜನೆಯು ಮಹಾತ್ಮ ಗಾಂಧೀಜಿಯವರ ಜನ್ಮದಿನವಾದ 2ನೇ ಆಕ್ಟೋಬರ್ 1951ರಲ್ಲು ಪ್ರಾರಂಭಿಸಲಾಗಿದೆ. ಕೇಂದ್ರ ಸಂಸ್ಥೆಯವರು ಕೊಡಗಿನ ಎಲ್ಲಾ ಜನರಿಗೆ ಮೂರಾಟ ಮಾಡಲು 1,76,000 ಸೀಲುಗಳನ್ನು ಈ ವರ್ಷ ಕಳುಹಿಸಿಕೊಟ್ಟಿರುವರು.

ಪ್ರತಿಯೊಬ್ಬನೂ ಒಂದಾಣೆ ಕೊಟು ಒಂದೊಂದು ಸೀಲುಗಳನ್ನು ಕೊಂಡುಕೊಳ್ಳುವುದರಿಂದ ಕೊಡಗಿನಲ್ಲಿ ಕ್ಷಯರೋಗ ನಿವಾರಣೆಗಾಗಿ ಎಷ್ಟು ಸಹಾಯವಾಗುತ್ತದೆಂಬುದನ್ನು ನಾನು ಹೇಳುವುದು ಅನಾವಶ್ಯ.

ಗತ ವರ್ಷದಲ್ಲಿ ಸೀಲು ಮೂರಾಟದಿಂದ ರೂ. 7,050/- ಸಿಕ್ಕಿದೆ. ಇದರಿಂದ ರೂ. 6,000/-ವನ್ನು ಕೇಂದ್ರ ಸಭೆಯವರು ನಮಗೆ ಕೊಟ್ಟಿರುತ್ತಾರೆ. ಈ ಹಣದಿಂದ ಮತ್ತು ನಮ್ಮ ಸರಕಾರವು ಕೊಡುವ ರೂ. 4,000/-ದಿಂದ ಮಡಿಕೇರಿಯಲ್ಲಿ ಕ್ಷಯರೋಗಿಗಳ ವಸತಿಗಾಗಿ ಒಂದು ಆಸ್ಪತ್ರೆಯು ಕಟ್ಟಲ್ಪಡುವುದು. ಶೀಘ್ರದಲ್ಲಿಯೇ ಒಬ್ಬ ಕ್ಷಯರೋಗದ ವಿಷಯದಲ್ಲಿ ಹೆಚ್ಚಿನ ಪ್ರವೀಣತೆಯನ್ನು ಹೊಂದಿದ ವೈದ್ಯನನ್ನು ನಮ್ಮ ಸರಕಾರವು ನೇಮಿಸುವುದು. ಈ ವಿಷಯದಲ್ಲಿ ನಾವು ಸಹಾಯ ಮಾಡಬೇಕಾಗಿ ನಾನು ಸ್ಥಳೀಯ ಸಂಸ್ಥೆಯ ಪರವಾಗಿ ನಿಮ್ಮನ್ನು ಕೇಳಿಕೊಳ್ಳುತ್ತೇನೆ. ನೀವು ಸೀಲುಗಳನ್ನು ಕೊಂಡು ಕೊಳ್ಳುವುದರಿಂದಲೂ ಮತ್ತು ನಿಮ್ಮ ಸ್ನೇಹಿತರುಕೊಂಡುಕೊಳ್ಳುವಂತೆ ಮಾಡುವುದರಿಂದಲೂ ಈ ಸಹಾಯ ದೊರಕುತ್ತದೆ.

ಕಳೆದ ವರ್ಷ ಕೊಡಗಿನಲ್ಲಿ ಸುಮಾರು 300 ಕ್ಷಯ ರೋಗಿಗಳು ಇದ್ದರೆಂದು ಅವರ ಕಫದ ಪರೀಕ್ಷೆಯಿಂದ ತಿಳಿದು ಬಂದಿದೆ. ಮೇಲೆ ಹೇಳಿದ ಪ್ರಕಾರ ಕ್ಷಯರೋಗ ಕಂಡುಬಂದ ಪ್ರತಿಯೊಬ್ಬ ಕ್ಷಯರೋಗಿಯು ಕಡಿಮೆ ಪಕ್ಷ ಬೇರೆ ಐದು ಜನರಿಗೆ ತನ್ನ ರೋಗವನ್ನು ಕೊಡುತ್ತಾನೆಂದು ಸಿದ್ಧಾಂತವಾಗಿದೆ. ಈ ಪ್ರಕಾರ ಕೊಡಗಿನಲ್ಲಿ ಸಾಧಾರಣ 1,500 ಕ್ಷಯ ರೋಗಿಗಳಿರಬಹುದು. ಈ ಕ್ಷಯರೋಗಿಗಳಿಗೆ ಔಷಧೋಪಚಾರ ಮಾಡಲು ತಕ್ಕ ಆಸ್ಪತ್ರೆಗಳು ಮತ್ತು ಇನ್ನಿತರ ಸಾಧನಗಳು ಬೇಕಾಗಿವೆ. ಇದಕ್ಕೆಲ್ಲಾ ತುಂಬಾ ಹಣವು ಆವಶ್ಯ. ಆದ್ದರಿಂದ ನಮ್ಮ ದೇಶದಿಂದ ಕ್ಷಯರೋಗವನ್ನು ನಿರ್ಮೂಲಗೊಳಿಸಲು ಕೈಕೊಂಡಿರುವ ಯೋಜನೆಗಳಿಗೆ ಸಹಾಯ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಇದಕ್ಕಾಗಿ ಕೇಂದ್ರ ಸಂಸ್ಥೆಯವರು ಕ್ಷಯರೋಗ ಸಮ್ಬಂಧವಾದ ಸೀಲು ಮೂರಾಟ ಹೂಡುವ ಯೋಜನೆಯನ್ನು ಕೈಕೊಂಡಿರುವರು. ಕ್ಷಯರೋಗವು ನಮ್ಮ ದೇಶದಲ್ಲಿ ಎಷ್ಟರ ಮಟ್ಟಿಗೆ ಬೇರೂರಿಕೊಂಡಿದೆ ಏಂಬುವುದನ್ನು ಮತ್ತು ಅದನ್ನು ಬೇಗನೆ ನಿವಾರಿಸುವುದು ಆವಶ್ಯವೆಂಬುವುದನ್ನು ಸರ್ವಗೆ ತಿಳಿಯುವಂತೆ ಮಾಡುವುದೇ ಈ ಯೋಜನೆಯ ಮುಖ್ಯ ಉದ್ದೇಶ. ಕ್ಷಯರೋಗದ ವಿಷಯದಲ್ಲಿ ನಮ್ಮ ದೇಶದ ಪರಿಸ್ಥಿತಿಯು ಭಯಾನಕವಾಗಿದೆ. ಈ ರೋಗವು ಇಂಡಿಯಾದೇಶದ ಐದು ಲಕ್ಷ ಜನರನ್ನು ವರ್ಷಂಪ್ರತಿ ಬಲಿತೆಗೆದುಕೊಳ್ಳುವುದಲ್ಲದೆ ಸಾಧಾರಣ 25 ಲಕ್ಷ ಜನರಿಗೆ ಅಂಟುವುದೆಂದು ತಿಳಿದುಬಂದಿದೆ. ಈ ಯೋಜನೆಯು ಕ್ಷಯರೋಗದ ಹಾವಳಿಯನ್ನು ಸರ್ವರಿಗೂ ತಿಳಿಯುವಂತೆ ಮಾಡುವುದಲ್ಲದೆ ಎಲ್ಲರೂ, ಇದನ್ನು ನಿವಾರಿಸಲು ಕೈಕೊಂಡಿರುವ ಸಂಸ್ಥೆಗಳಿಗೆ ಒಮ್ಮನಸ್ಸಿನಿಂದ ಸಹಾಯ ಮಾಡುವುದಕ್ಕೆ ಸಂದರ್ಭವನ್ನೊದಗಿಸಿಕೊಡುತ್ತದೆ.

ಕ್ಷಯರೋಗದಿಂದ ನರಳುತ್ತಿರುವ ನಮ್ಮ ಅಣ್ಣತಮ್ಮಂದಿಯರ ಆರ್ತ ಧ್ವನಿಯನ್ನು ನಾವು ಮರೆಯುವುದು ಬೇಡ. ಇವರನ್ನು ಈ ರೋಗದಿಂದ ಬಿಡುಗಡೆ ಮಾಡಲು ಸಹಾಯವು ಆವಶ್ಯ. ಈ ರೋಗವು ಅಕಸ್ಮಾತ್ತಾಗಿ ತಗಲುತ್ತದೆ. ಇದನ್ನು ಸುಲಭ ರೀತಿಯಿಂದ ನಿವಾರಿಸಿಕೊಳ್ಳಲು ಸಾಧ್ಯವಿಲ್ಲ. ಅವನೊಬ್ಬನೇ ಸಂಪಾದನೆಗಾರನಾದರೆ ಅವನ ಕುಟುಂಬವೂ ಕೂಡ ಕಷ್ಟಕ್ಕೊಳಗಾಗುವುದು.

ಕ್ಷಯ ರೋಗವನ್ನು ಬರೇ ವೈದ್ಯರು ಮತ್ತು ನರ್ಸ್‌ಗಳು ಇದಿರಿಸಿದರೆ ಸಾಲದು. ಸರ್ವರೂ ಇದನ್ನು ನಿರ್ಮೂಲ ಮಾಡಲು ಸಹಾಯವನ್ನು ನೀಡಬೇಕಾಗಿದೆ. ಈ ಸೀಲು ಮೂರಾಟ ಮಾಡುವ ಯೋಜನೆಯಲ್ಲಿ ಸಹಕಾರದ ತತ್ವವು ಒಳಕೊಂಡಿರುವುದರಿಂದ ಸರ್ವರೂ ಇದರಲ್ಲಿ ಭಾಗವಹಿಸಬಹುದು.

ಕ್ಷಯರೋಗ ನಿವಾರಣೆಗಾಗಿ ಕೆಲಸ ಮಾಡುವವರಿಗೆ ನಮ್ಮ ಸಹಾಯವನ್ನು ಕೊಡುವುದು ನಮ್ಮ ಮುಖ್ಯ ಕರ್ತವ್ಯ. ನಮ್ಮ ದೇಶದ ಪ್ರತಿಯೊಬ್ಬ ಗಂಡಸು ಮತ್ತು ಹೆಂಗಸು ಸೀಲನ್ನು ಕೊಂಡುಕೊಳ್ಳುವುದರಿಂದ ಹೆಚ್ಚಿನ ಸೇವೆಯನ್ನು ಸಲ್ಲಿಸಿದ ಹಾಗಾಗುತ್ತದೆ. ಜನರ ಒಳ್ಳೆಯ ಮನಸು ಮತ್ತು ಸಹಕಾರದಿಂದ ಎಲ್ಲವನ್ನೂ ಸಾಧಿಸಲು ಆಗುತ್ತದೆ. ಈ ವಿಷಯದಲ್ಲಿ ಈ ಕೆಲಸಕ್ಕೆ ನಮೂದಿಸಿರುವ ಸಂದೇಶವನ್ನು ನಮ್ಮ ಚೀಫ್ ಕಮಿಶನರಾದ ಕರ್ನಲ್ ದಯಾಸಿಂಗ್ ಬೇಡಿಯವರು ಕೊಟ್ಟಿರುವರು.

"ಕಳೆದ ವರ್ಷ ಈ ಒಳ್ಳೆಯ ಕಾರ್ಯಕ್ಕೆ ನೀವು ಮಾಡಿದ ಸಹಾಯಕ್ಕಾಗಿ ನಾನು ನಿಮಗೆ ತುಂಬಾ ಕೃತಜ್ಞನಾಗಿದ್ದೇನೆ. ಈ ರೋಗದಿಂದ ಪ್ರತಿ ವರ್ಷವೂ ತುಂಬಾ ಜನರು ಸಾಯುತ್ತಾರೆಂದೂ ಮತ್ತು ಅವರಿಂದ ಎಷ್ಟೋ ಮನೆಗಳು ನಿಷ್ಪ್ರಯೋಜಕವೂ ಸಹಾಯಶೂನ್ಯವೂ ಆಗುತ್ತದೆಂಬುದು ನೀವೆಲ್ಲಾ ತಿಳಿದ ಸಂಗತಿಯಾಗಿದೆ. ಆದ್ದರಿಂದ ಅದನ್ನು ಇದಿರಿಸಿ ನಮ್ಮ ಸಮಾಜದಿಂದ ಅದನ್ನು ನಿರ್ಮೂಲ ಮಾಡುವುದು ನಮ್ಮ ಕರ್ತವ್ಯವಾಗಿದೆ. ಕೊಡಗಿನಲ್ಲಿ ಈ ರೋಗವನ್ನು ನಿರ್ಮೂಲ ಮಾಡಲು ನೀವೆಲ್ಲರೂ ಉದಾರ ಮನಸಿನಿಂದ ತುಂಬಾ ಧನ ಸಹಾಯ ಮಾಡಿ ನಿಮ್ಮ ಸಹಾಯವನ್ನು ನೀಡುವಿರೆಂದು ನಾನುನಂಬಿದ್ದೇನೆ.

ಟಿ. ಬಿ. ಮೇದಪ್ಪ,
ಸಿವಿಲ್ ಸರ್ಜನ್ ಮತ್ತು ಕಾರ್ಯದರ್ಶಿ ಸ್ಥಳೀಯ ಸಂಸ್ಥೆ.

ಕೊ ಡ ಗು

ತಾ. ೨೬–೧೦–೧೯೫೧ನೇ ಶುಕ್ರವಾರ

ಪಾಕಿಸ್ತಾನದ ನಷ್ಟ.

ಅಚಾರ್ಯ ಹುಣಸೂರು

ರಾವಲ್ಪಿಂಡಿಯಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡುತ್ತಿದ್ದ ಪಾಕಿಸ್ತಾನದ ಪ್ರಧಾನ ಮಂತ್ರಿ ಲಿಯಾಖತ್ ಅಲಿಖಾನರು ಕೊಲೆಗಡುಕನೊಬ್ಬನ ಗುಂಡಿಗೆ ತುತ್ತಾದರೆಂಬ ಹೃದಯದ್ರಾವಕ ವಾರ್ತೆಯನ್ನು ವಿಷಾದದಿಂದ ಬರೆಯಬೇಕಾಗಿದೆ. ಸಮ್ಮ ನೆರೆರಾಜ್ಯವಾದ ಪಾಕಿಸ್ತಾನಕ್ಕೊದಗಿದ ಈ ದುರಂತದ ದುಃಖದಲ್ಲಿ ನಾವೂ ಪಾಲುಗಾರರು. ಲಿಯಾಖತರು ನಿಷ್ಣಾತರಾಜಕಾರಣಿಗಳು. ಪಾಕಿಸ್ತಾನವನ್ನು ಕಟ್ಟಿ ಬಲವಾದ ತಳಹದಿಯಲ್ಲಿ ನಿಲ್ಲಿಸಿದವರು. ರಾಜಕೀಯ ದೃಷ್ಟಿಯಲ್ಲಿ ಭಿನ್ನಭಾವಗಳಿದ್ದರೂ ವ್ಯಕ್ತಿಗತವಾಗಿ ಸೌಮ್ಯರೂ, ಗುಣಶಾಲಿಗಳೂ ಆಗಿದ್ದರು. ಅವರು ಸ್ವಾತಂತ್ರ್ಯ ದೊರೆಯುವ ಮೊದಲು ಕೊಡಗಿಗೂ ಬಂದಿದ್ದು ಮಡಿಕೇರಿ ಮತ್ತು ವೀರಾಜಪೇಟೆಗಳಲ್ಲಿ ಎರಡು ಭಾಷಣ ಮಾಡಿದ್ದರು. ಪಾಕಿಸ್ತಾನದ ಆಂತರಿಕ ಆಡಳಿತದಲ್ಲಿ ಅವ್ಯವಸ್ಥೆಯೂ, ಅಶಾಂತಿಯೂ ಅಲ್ಲಲ್ಲಿ ತೋರಿ ಬಂದಿದ್ದರೂ, ಪಾಕಿಸ್ತಾನದ ಫಲುಮೆಯು ಹಲವು ವಿಚಾರಗಳಲ್ಲಿ ಭಾರತಕ್ಕೆ ಬದ್ಧ ವಿರುದ್ಧವಾಗಿದ್ದರೂ ಪಂಡಿತ ಜವಾಹರರು ಹೇಳಿದಂತೆ ತಿಯಾಖತರು ಪಾಕಿಸ್ತಾನದ ಉಗ್ರವಾದಿಗಳ ಕೈಮೇಲಾಗದಂತೆ ತಮ್ಮ ಸೌಮ್ಯ ಪ್ರಭಾವವನ್ನು ಬೀರಿದ್ದರು. ಅವರ ಈ ಅಮಾನುಷ ಕೊಲೆಯು ಖಂಡಾರ್ಹವಾದ್ದು.

ಪುಷ್ಪ ಪರಂಪರೆ.

ಮುಸ್ಲಿಂ ಜಗತ್ತಿನಲ್ಲಿ ಈ ಕೊಲೆಗಡುಕ ಪ್ರವೃತ್ತಿಯು ಇಂದು ನಿನ್ನೆಯದಲ್ಲ. ರಾಜಕೀಯ ನ್ಯಾಯವನ್ನು ಕೋವಿಯ ಸಹಾಯದಿಂದ ನಿರ್ಣಯಿಸಲೆತ್ನಿಸುವ ದುಷ್ಟ ಪರಂಪರೆಯು ಮುಸ್ಲಿಂ ಜಗತ್ತಿನಲ್ಲಿ ಹೆಚ್ಚಾಗಿದೆ. ಜಾರ್ಡನಿನ ರಾಜ ಅಬ್ದುಲ್ಲಾರ ಕೊಲೆ, ಈರಾಣದ ಮುಖ್ಯ ಮಂತ್ರಿ ಅಲಿರಾಜ್ಮಾರಾರ ಕೊಲೆ, ಈಜಿಪ್ತಿನ ಮಂತ್ರಿಗಳ ಕೊಲೆ ಹೀಗೆ ಅನೇಕ ರಾಜಕೀಯ ಕೊಲೆಗಳ ನಿದರ್ಶನಗಳನ್ನು ಕೊಡಬಹುದು. ಈ ಪ್ರವೃತ್ತಿ ಇಂದಿನ ಜಗತ್ತಿನಲ್ಲಿ ಹೆಚ್ಚುತ್ತಿದೆ. ಬರ್ಮಾದ ಮಂತ್ರಿ ಮಂಡಳದ ಸಮೂಲ ಕೊಲೆ, ಭರತಖಂಡದ ಭಾಗ್ಯವಿಧಾತ ಬಾಪೂವಿನ ದುರಂತ ಹತ್ಯ ಇವು ಕಣ್ಣಿಗೆ ಕಟ್ಟಿದಂತಿವೆ. ಬಹುಮಟ್ಟಿಗೆ ಮುಂಜರಿದಿರುವೆನೆಂದೂ, ಸುಸಂಸ್ಕೃತನೆಂದೂ ಹೇಳಿಕೊಳ್ಳುವ ನಾಗರಿಕ ಮಾನವನು ಈ ಹಿಂಸಾ ಮಾರ್ಗವನ್ನು ಇಂದೂ ಅನುಸರಿಸುತ್ತಿರುವುದು ನಾಚಿಕೆಗೇಡಿನದು.

ಪರಿಹಾರ ಮಾರ್ಗವಲ್ಲ.

'ಕತ್ತಿಯನ್ನೆತ್ತುವವನು ಕತ್ತಿಯಿಂದಲೇ ಹತನಾಗುವನು' ಎಂಬ ನಾಣ್ನುಡಿ ಈ ಸಂದರ್ಭದಲ್ಲಿ ನಮಗೆ ಜ್ಞಾಪಕಕ್ಕೆ ಬರುತ್ತದೆ. ಹಿಂಸೆಯು ಮಾನವನಿಗೆ ಹೇಳಿದ ಮಾರ್ಗವಲ್ಲ. ಕೆಲವು ದಿನಗಳ ಹಿಂದೆ ಕಾಶ್ಮೀರ ಸಮಸ್ಯೆಯ ವಿಚಾರದಲ್ಲಿ ಹಿಂದೂಸ್ಥಾನ–ಪಾಕಿಸ್ತಾನಗಳ ಸಂಬಂಧದಲ್ಲಿ ಕಾವು ಏರಿಯುದ್ದದ ಮಾತು ಕೇಳಿಬರುತ್ತಿದ್ದಾಗ ಲಿಯೂಖತರು ಶಮ್ಯ ಭದ್ರ ಮಾರ್ಗವನ್ನು ರಾಷ್ಟ್ರೀಯ ಸಂಕೇತವಾಗಿ ಪಾಕಿಸ್ತಾನಿಗಳಿಗೆ ತೋರ್ಪಡಿಸಿದರು. ಈ ರೀತಿಯ ಹಿಂಸಾ ಪ್ರಜ್ಞೋದನೆಯು ಮಾರ್ಗವೇ ಇಂದಿನ ದುರಂತಕ್ಕೆ ಕಾರಣವೆನ್ನಬಹುದು. ಲಿಯೂಖತರ ಕೊಲೆಗಡುಕನು ಯಾರೆಂಬುದೂ, ಆತನ ಗುರಿ ಏನಿತ್ತೆಂಬುದೂ ಇನ್ನೂ ಸ್ಪಷ್ಟವಾಗಿಲ್ಲವಾದರೂ ಪಾಕಿಸ್ತಾನದಲ್ಲಿ ಎಲ್ಲವೂ ಸುಸೂತ್ರವಾಗಿ ನಡೆಯುತ್ತಿಲ್ಲವೆಂಬುದಕ್ಕೆ ಇದು ನಿದರ್ಶನವಾಗಿದೆ. ಹಿಂಸೆ, ಆಟೋಪದ ಪ್ರಚಾರಗಳು ಎಂದೂ ಸಮಸ್ಯೆಗಳ ಪರಿಹಾರ ಮಾರ್ಗಗಳಲ್ಲ. ಲಿಯೂಖತರ ಕೊಲೆಯು ಈ ವಿಚಾರದಲ್ಲಿ ನಿದರ್ಶನವಾಗಿರಲಿ ಇದು ಇತರರಿಗೆ ಮಾರ್ಗದರ್ಶನ ಮಾಡಲಿ.

ಜೀವನ ಮರಣ:

ಜೀವನ ಮತ್ತು ಮರಣ ಇವೆರಡೂ ಒಂದೇ ನಾಣ್ಯದ ಎರಡು ಬದಿಗಳು. ಲಿಯೂಖತರು ೨೦ ಸಾವಿರ ಜನರ ಸಭೆಯಲ್ಲಿ ಮಾತನಾಡುತ್ತಿದ್ದಾಗ, ಎಲ್ಲರೂ "ಲಿಯೂಖತ್ ಅಲೀ ಕೀ ಜೈ" ಎಂದು ಕೂಗುತ್ತಿದ್ದರು. ಲಿಯೂಖತರು ಪ್ರತಿಸೈಗೆ ಫೆನತೆಗೆ ಅಲ್ಲಿ ಎಣೆ ಇರಲಿಲ್ಲ. ಮರುಕ್ಷಣ ಕೊಲೆಗಡುಕನ ಗುಂಡು ಅವರನ್ನು ಆಹುತಿ ತೆಗೆದುಕೊಂಡಿತು. 'ಲಿಯೂಖತ್ ಅಲಿ ಝಿಂದಾಬಾದ್' ಎಂದು ಕೂಗುತ್ತಿದ್ದ ಜನ ಸಮೂಹವು 'ಲಿಯೂಖತರು ಚಿರಾಯುವಾಗಲೀ' ಎಂದು ಕೂಗಬೇಕಾಯಿತು. ಜಯಕಾರದ ಆ ಕೂಗಿಗೂ, ಆರ್ತನಾದದ ಈ ಧ್ವನಿಗೂ ಎಷ್ಟೊಂದು ಸಾಮ್ಯ! ಜೀವನದ ಪ್ರತಿ ಹೆಜ್ಜೆಯಲ್ಲಿಯೂ ಮರಣವಿದೆ. ಮರಣವು ಪವಿತ್ರವಾದುದು. ಅದರಲ್ಲೂ ದೇಶಕ್ಕಾಗಿ, ಬಹುಜನರ ಹಿತಕ್ಕಾಗಿ ದುಡಿಯುತ್ತಿದ್ದಾಗ ಜೊತೆತ ಮರಣವು ಉತ್ತಮೋತ್ತಮವಾದುದು. ಹಾಗೆಂದಾಗ ಕೊಲೆಗಡುಕನ ಹೀನಕೃತ್ಯವು ಕ್ಷಮ್ಯಾರ್ಹವೆಂದು ಯಾರೂ ಭಾವಿಸದಿರಲಿ. ದೇಶಕ್ಕಾಗಿ ದುಡಿದು ಮರಣವನ್ನಾಲಿಂಗಿಸಿದ ಲಿಯೂಖತರ ಆತ್ಮಶಾಂತಿಗಾಗಿ ಅನನ್ಯತೆಯಿಂದ ನಾವು ಪ್ರಾರ್ಥಿಸುವೆವು. ಅವರ ಆದರ್ಶ ನಿಧನವು ಹಿಂಸಾಪಥದ ಕ್ಷುಲ್ಲತೆಯ ಬಗ್ಗೆ ಇತರರ ಕಣ್ತೆರೆಯಲಿ.

ವರ್ತಮಾನ.

ತಾ. ೧೭–೧೦–೫೧ ರಲ್ಲಿ ಸೋಮವಾರಪೇಟೆಯಲ್ಲಿ ಜನಾಬ್ ಅಬ್ದುಲ್ ಖಾದರ್ ಇವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿ ಲಿಯೂಖತ್ ಅಲೀಖಾನರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು.

ಮೈಸೂರು ದಸರಾ ಹಾಕಿ ಪಂದ್ಯಾವಳಿಯಲ್ಲಿ ಮೈಸೂರಿನಲ್ಲಿರುವ ಕೊಡಗರ 'ಕೂರ್ಗ್ ಫ್ರೆಂಡ್ಸ್' ಟೀಮಿನ ಭಾಗವಹಿಸಿಕಡೇ ಆಟದಲ್ಲಿ ಮೈಸೂರು ರೈಲ್ವೇ ಟೀಮನ್ನು ಸೋಲಿಸಿ ಕಪ್ಪನ್ನು ಗೆದ್ದರು. ಶ್ರೀ ವಂಡೇಪಂಡ ಬಿ. ಜಂಗಪ್ಪನವರು 'ಕೂರ್ಗ್ ಫ್ರೆಂಡ್ಸ್' ಟೀಮಿನ ಕೆಪ್ತನರಾಗಿದ್ದರು.

ಶ್ರೀಕಾವೇರಿ ಆಶ್ರಮದಲ್ಲಿ ತಾರೀಕು ೨೧–೧೦–೫೧ ರಲ್ಲಿ ಶ್ರೀ. ಕೆ. ಟಿ. ಉತ್ತಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀಕಾವೇರಿ ತೀರ್ಥಪೂಜೆ ಮತ್ತು ಸಾರ್ವಜನಿಕ ಸಭೆ ನಡೆಯಿತು. ಶ್ರೀಗಳಾದ ಎಸ್. ಎಂ. ಅಚ್ಚಪ್ಪ, ವಿ. ಎಸ್. ರಾಮಕೃಷ್ಣ ಇವರುಗಳು ಭಾಷಣ ಮಾಡಿದರು. ಶ್ರೀ. ಬಿ. ಕೆ. ಸುಬ್ರಾಯರು 'ಸಂತ ಸಕೂಬಾಯಿ' ಎಂಬ ಹರಿಕಥೆ ಮಾಡಿದರು.

ವೀರಾಜಪೇಟೆ ಕೊಡವ ಸಮಾಜದ ಆಟೋಟಗಳ ಸ್ಪರ್ಧೆ ಮತ್ತು ವಿಶೇಷ ಮಹಾಸಭೆಯು ಹೈಸ್ಕೂಲು ಮೈದಾನದಲ್ಲಿ ತಾ. ೨೮–೧೦–೫೧ ಬೆಳಿಗ್ಗೆ ೮ ಗಂಟೆಗೆ ನಡೆಯುವುದು.

ಈ ವರ್ಷದ ಅಂತರ್ಕಾಲೇಜು ಹಾಕಿ ಪಂದ್ಯಾವಳಿಗೆ ಮಡಿಕೇರಿಯು ಒಂದು ಕೇಂದ್ರವಾಗಿದ್ದು ಮಡಿಕೇರಿಯ ಸರಕಾರಿ ಕಾಲೇಜು ಟೀಮು ಮಡಿಕೇರಿಯಲ್ಲಿ ತಾ. ೩೦ರಲ್ಲಿ ತಲಚೇರಿಯ ಬ್ರೆನೆನ್ ಕಾಲೇಜ್ ಟೀಮಿನೊಡನೆಯೂ, ಇದರಲ್ಲಿ ಗೆದ್ದವರು ತಾ. ೩೧ರಲ್ಲಿ ಮಂಗಳೂರು ಎಲೋಷಿಯಸ್ ಕಾಲೇಜ್ ಮತ್ತು ಗವರ್ನ್‌ಮೆಂಟ್ ಕಾಲೇಜುಗಳೊಳಗೆ ಗೆದ್ದವರೊಡನೆಯೂ ಮಡಿಕೇರಿ ವೇನ್ಸ್‌ಕಾಂಪೌಂಡ್ ವೈದಾನದಲ್ಲಿ ಆಡುವರು.

ಕೊಡಗಿನಲ್ಲಿ 'ಮಿಸ್ ಎ ಮಿಲ್' ಚಳವಳಿಯಲ್ಲಿ ಒಟ್ಟು ೧೧,೫೫೫ ಸೇರು ಅಕ್ಕಿಯೂ, ೨೪೧ ಸೇರು ರಾಗಿಯೂ ೧೫೫ ರೂಪಾಯಿಗಳೂ ಸಂಗ್ರಹವಾಗಿದ್ದು ಈ ವರೆಗೆ ೯,೬೦೦ ಸೇರು ಅಕ್ಕಿಯನ್ನು ಕಳುಹಿಸಲಾಗಿದೆ. ಕಳುಹಿಸುವ ಖರ್ಚು ರೂ. ೭೮–೧೨–೦ ಕಳೆದು ಬಾಕಿ ಹಣ ಕೈಯ್ಯಲ್ಲಿದೆಯೆಂದು ತಿಳಿಸುತ್ತಾರೆ.

ಹಿಂದೂದೇಶದ ಮುಖ್ಯ ಚುನಾವಣಾ ಕಮಿಷನರಾದ ಶ್ರೀ ಸುಕುಮಾರ ಸೇನ್‌ರವರು ತಾ. ೧೯ರಲ್ಲಿ ಮಡಿಕೇರಿಗೆ, ಬಂದು ತಾ. ೨೦ರಲ್ಲಿ ಹಾಕತ್ತೂರಿನಲ್ಲಿ ನಡೆದ 'ನೂಕ್ ಇಲೆಕ್ಷನ್'ನ್ನು ಪರಿಶೀಲಿಸಿದರು. ಹುಂಬರೂವ ಚುನಾವಣೆಯ ವಿಚಾರ ಸೂಕ್ಷ್ಮ ಸಲಹೆಗಳನ್ನಿತ್ತು ತಾ. ೨೧ರಲ್ಲಿ ಪಾಪಸು ಹೋದರು.

ಈ ತಾ. ೨೦ನೇದ ಬರುವ ಫೆಬ್ರವರಿ ಅಖೈರ್ ವರೆಗೆ ಶ್ರೀ ಕುಟ್ಟಂಡ ತಮ್ಮಯ್ಯನವರನ್ನು ಪ್ರಥಮ ದರ್ಜೆಯ ವಿಶೇಷ ಮೇಜಿಸ್ಟ್ರೇಟರಾಗಿ ನೇಮಿಸಿರುವರು. ಇವರು ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆಗಳಲ್ಲಿ ತಮ್ಮ ಕೋರ್ಟ್ ನಡೆಸುವರು.

೨ ರೂಪಾಯಿ, ೫ ರೂಪಾಯಿ ಹೊಸ ನೋಟುಗಳು.

೨ ರೂಪಾಯಿ ಹಾಗೂ ೫ ರೂಪಾಯಿಗಳ ಹೊಸ ಮಾದರಿಯ ನೋಟುಗಳನ್ನು ಭಾರತ ರಿಜರ್ವ್ ಬ್ಯಾಂಕು ಶೀಘ್ರದಲ್ಲಿಯೇ ಪ್ರಸಿದ್ಧಿಪಡಿಸುವುದು. ನೋಟಿನ ಬೆಲೆಯನ್ನು ಇಂಗ್ಲಿಷ್‌ನೊಂದಿಗೆ ಹಿಂದೀ ಅಕ್ಷರಗಳಲ್ಲಿಯೂ ಮುದ್ರಿಸಲಾಗುವುದು. ಅಲ್ಲದೆ ಹಿಂಬದಿಯಲ್ಲಿ ನೋಟಿನ ಬೆಲೆಯನ್ನು ಬಂಗಾಲಿ ಗುಜರಾತಿ ಕನ್ನಡ, ತಮಿಳು, ತೆಲಗು, ಉರ್ದು ಓರಿಯಾ ಅಕ್ಷರಗಳಲ್ಲಿಯೂ ಮುದ್ರಿಸಲಾಗುವುದು.

ನೆಹರೂರವರ ಚುನಾವಣೆ ಸಂಚಾರ.

ಚುನಾವಣೆ ಪ್ರಚಾರಕ್ಕಾಗಿ ದೇಶದಾದ್ಯಂತ ಕಾಂಗ್ರೆಸ್ ಅಧ್ಯಕ್ಷ ನೆಹರೂರವರು ಕೈಕೊಳ್ಳಲಿರುವ ಆಯಾ ವಾರಗಳ ಪ್ರವಾಸದ ಕಾರ್ಯಕ್ರಮವನ್ನು ನಿರ್ಧರಿಸುವುದಕ್ಕಾಗಿ ಎ. ಐ. ಸಿ. ಸಿ. ಯ ಪ್ರಧಾನ ಕಾರ್ಯದರ್ಶಿಗಳು ಮತ್ತು ಪ್ರದೇಶ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರು ಮೊದಲಾದವರು ತಾ ೨೧ರಲ್ಲಿ ಸಭೆ ಗೂಡಿದರೆಂದು ತಿಳಿದಿದೆ. ನೆಹರೂರವರ ಸಂಚಾರವು ಬರುವ ತಿಂಗಳ ಮಧ್ಯದಿಂದ ಪ್ರಾರಂಭವಾಗುವುದು.

ಪಾರ್ಲಿಮೆಂಟಿಗೆ ಕರ್ನಾಟಕದ ಹುರಿಯಾಳುಗಳು.

ಕರ್ನಾಟಕದಿಂದ ಪಾರ್ಲಿಮೆಂಟಿನ ಸ್ಥಳಗಳಿಗೆ ಕಾಂಗ್ರೆಸಿನ ಪರವಾಗಿ ಸ್ಪರ್ಧಿಸುವ ಹುರಿಯಾಳುಗಳ ಪಟ್ಟಿಯನ್ನು ಅಖಿಲಭಾರತ ಕಾಂಗ್ರೆಸು ಸಮಿತಿಯು ಕಾರ್ಯದರ್ಶಿಯು ತಾ. ೨೨ರಲ್ಲಿ ಪ್ರಕಟಿಸಿದರು. ಕೊಡಗಿನ ಹುರಿಯಾಳುಗಳ ಬಗ್ಗೆ ಹಿಂದಿನಿಂದ ನಿರ್ಣಯಿಸಲಾಗುವುದು.

ಈ ಪಟ್ಟಿಯನ್ನು ಕೊನೆಯದಾಗಿ ತಯಾರಿಸಿದ ಕೇಂದ್ರ ಚುನಾವಣಾ ಮಂಡಳವು ಕೇಂದ್ರದ ಸುದ್ದಿ ಹಾಗೂ ಬಾನುಲಿ ಶಾಖೆಯ ಸಹಾಯಕ ಮಂತ್ರಿ ಶ್ರೀ. ಆರ್. ಆರ್. ದಿವಾಕರರಿಗೆ ಕೇಂದ್ರದ ಮೇಲ್ಮನೆ (ಕೌನ್ಸಿಲ್ ಆಫ್ ಸ್ಟೇಟ್) ಯ ಸ್ಥಳವನ್ನು ಕೊಡಬೇಕೆಂದೂ ಸದ್ಯದ ಪಾರ್ಲಿಮೆಂಟ್ ಸದಸ್ಯ ಶ್ರೀ. ಬಿ. ಎನ್. ಮುನವಳ್ಳಿಯವರು ಮುಂಬಯಿ ರಾಜ್ಯ ಮೇಲ್ಮನೆ (ಲೆಜಿಸ್ಲೇಟಿವ್ ಕೌನ್ಸಿಲ್) ಯ ಸ್ಥಳಕ್ಕೆ ಉಮೇದುವಾರರಾಗಬೇಕೆಂದೂ ನಿರ್ಣಯಿಸಿದೆ. ಆರಿಸಲ್ಪಟ್ಟ ಹುರಿಯಾಳುಗಳಲ್ಲಿ ನಾಲ್ವರು ಸದ್ಯದ ಪಾರ್ಲಿಮೆಂಟಿನ ಸದಸ್ಯರಿದ್ದಾರೆ. ಹುರಿಯಾಳುಗಳ ಪಟ್ಟಿಯು ಈ ಕೆಳಗೆ ಕಾಣಿಸಿದಂತಿದೆ.

ಬಳ್ಳಾರಿ ಜಿಲ್ಲೆ

ಶ್ರೀ ಟಿ. ಸುಬ್ರಹ್ಮಣ್ಯಂ
ದ. ಕನ್ನಡ ಜಿಲ್ಲೆ (ಉತ್ತರ)

ಶ್ರೀ ಯು. ಶ್ರೀನಿವಾಸ ಮಲ್ಯ
ದ. ಕನ್ನಡ ಜಿಲ್ಲೆ (ದಕ್ಷಿಣ)

ಶ್ರೀ ಬಿ. ಶಿವರಾವ್
ಬೆಳಗಾವಿ ಜಿಲ್ಲೆ (ಉತ್ತರ)

ಶ್ರೀ ಬಿ. ಎಸ್. ದಾತಾರ
ಬೆಳಗಾವಿ ಜಿಲ್ಲೆ (ದಕ್ಷಿಣ)

ಶ್ರೀ ಎಸ್. ವಿ. ಪಾಟೀಲ
ವಿಜಾಪುರ ಜಿಲ್ಲೆ (ಉತ್ತರ)

ಶ್ರೀ ಆರ್. ಜಿ. ದುಬೆ
ವಿಜಾಪುರ ಜಿಲ್ಲೆ (ದಕ್ಷಿಣ)

ಶ್ರೀ ಆರ್. ಬಿ. ಬಿದರಿ
ಧಾರವಾಡ ಜಿಲ್ಲೆ (ಉತ್ತರ)

ಶ್ರೀ ಡಿ. ಪಿ. ಕರಮರಕರ
ಧಾರವಾಡ ಜಿಲ್ಲೆ (ದಕ್ಷಿಣ)

ಶ್ರೀ ಟಿ. ಆರ್ ನೆಸ್ವಿ
ಉತ್ತರ ಕನ್ನಡ ಜಿಲ್ಲೆ

ಶ್ರೀ ಜೋಕಿಂ ಆಳ್ವಾ

ಮತದಾರರ ಕೇಳಿಕೆ

ಕೊಡಗಿನ ಮುಂದಿನ ಕೌನ್ಸಿಲು ಚುನಾವಣೆಗೆ ಯಾವ ಪಾರ್ಟಿ ಪಂಗಡಗಳಾದರೂ ತಮ್ಮ ಸ್ವೇಚ್ಛೆಯಿಂದ ಮೆಂಬರುಗಳನ್ನು ನಿಲ್ಲಿಸುವುದು ಪ್ರಜಾಸತ್ತೆಗೆ ವಿರುದ್ಧವೆಂತಲೂ, ಆಯಾ ಪಂಗಡಗಳು ಮೆಂಬರುಗಳ ಹೆಸರನ್ನು ಕೊಡುವ ಮುನ್ನ, ಆಯಾ ವೋಲಿಂಗ್ ಸೆಂಟರುಗಳಲ್ಲಿ ವಿಾಟಿಂಗು ನಡೆಸಿ ಮತದಾರರ ಒಪ್ಪಿಗೆಯನ್ನು ಪಡೆದು ಚುನಾವಣೆ ಪಟ್ಟಿ ಜಾಹಿರಂಗ ಪಡಿಸತಕ್ಕದ್ದೆಂದೂ ಈ ಮೂಲಕ ಕೇಳಿಕೊಳ್ಳುತ್ತೇನೆ. 'ಮತದಾರ'

ಬಸ್ಸು ಪ್ರಯಾಣ

ಈ ತಾ|| ೧೩ರಲ್ಲು, ನಾನು ಕಟ್ಟಕ್ಕೆ ಜಗದೀಶ್ವರ ಬಸ್ಸಿನಲ್ಲಿ ಬಂದೆ. ಅದು ಅರ್ಧ ಮಾರೆನಾಡಿಗೆ ಹೋಗಿ ಅಲ್ಲಿಂದ ಹಿಂತಿರುಗಿ ಕಾವೇರಿ ಬಸ್ಸಿನೊಂದಿಗೇ ಈ ಕಟ್ಟಕ್ಕೆ ಜೊತೆ ಜೊತೆಯಲ್ಲಿ ಬಂತು. ಆದುದರಿಂದ ಬಸ್ಸು ಹತ್ತುವವರಿಗೂ ಇಳಿಯುವವರಿಗೂ ಬಹಳ ತೊಂದರೆಯಾಯಿತು. ಯಾಕೆಂದರೆ ಹಿಂದೆ ಮುಂದೆ ಬಸ್ಸು ಇರುವುದರಿಂದ ಪ್ರಾಣಕ್ಕೆ ಅಪಾಯ! ಬಸ್ಸು ಸಮಯಕ್ಕೆ ಸರಿಯಾಗಿ ತಲಪದ್ದರಿಂದ ಬಸ್ಸು ಇಳಿದು ಹಳ್ಳಿಯಲ್ಲಿ ಮನೆಗೆ ಹೋಗುವ ಪ್ರಯಾಣಿಕರಿಗೆ ಕತ್ತಲೆಯಲ್ಲಿ ಬಹಳ ಕಷ್ಟವಾಯಿತು. ದಾರಿಯಲ್ಲಿ ಟೀ ಸಿಗರೇಟು ಚಿಕ್ಕಿಂಗ್ಸು, ಹೀಗೆ ಸಮಯವ ಜವಾಗುತ್ತದೆ.

ಶ್ರೀಮಂಗಲದಲ್ಲಿ, ಜಗದೀಶ ಬಸ್ಸಿಗೆ ಸಾಧಾರಣ ಇಪ್ಪತ್ತು ಚೀಲ ಹಿಂಡಿ ಗೊಬ್ಬರ ಟಾಪ್‌ಗೂ ಪುತ್ತು ದೊಡ್ಡಿ ಸೀಟಿಗೂ ಒಂದೊಂದು ಚೀಲವನ್ನೂ ಮೂರು ಮೂರು ಜನರು ಹೊತ್ತು ತುಂಬಿಸಿದರು. ಈ ಗೊಬ್ಬರ ಒಬ್ಬ ರಿಟಾಯರ್ಡ್ ಆಫೀಸರರ ಕಾಫಿ ತೋಟಕ್ಕೆ ಎಂತ ತಿಳಿಯಬಂತು. ಲಗ್ಗೇಜು ಚಾರ್ಜು ಕಂಪೆನಿಗೆ ಹೋಗದಿದ್ದರೂ ಪೊಟ್ಟಿಗೂ, ಹಾಲಿಗೂ ತಾಗುತ್ತದೆ ಎಂದು ಪ್ಯಾಸೆಂಜರುಗಳು ಪಿಸುಗುಟ್ಟುತಿದ್ದರು. ಬಸ್ಸಿನಲ್ಲಿ ತುಂಬಾ ಪ್ರಯಾಣಿಕರಿದ್ದರು. ಫಸ್ಟ್‌ಕ್ಲಾಸ್ ಆಫೀಸರರಿಗೆ, ಸೆಕೆಂಡ್ ಕ್ಲಾಸು ಲೇಡಿಸಿಗೆ ಥರ್ಡ್ ಕ್ಲಾಸ್ ವ್ಯಾಪಾರಸ್ಥರಿಗೆ, ಪ್ಲಾಂಟರಿಗೆ ಮತ್ತು ಚಿಕ್ಕ ಆಫೀಸರರಿಗೆ. ದೊಡ್ಡ ಕ್ಲಾಸು ಹಳ್ಳಿಯವರಿಗೂ, ಗದ್ದೆ ಉಳುವವರಿಗೂ ಮತ್ತು ಮಜೂರರಿಗೆ. ಅಲ್ಲಿಯೂ ಗೊಬ್ಬರ ರಾಶಿ. ಹೀಗೆ ಪ್ಯಾಸೆಂಜರ್ ಬಸ್ಸನ್ನು ಗೊಬ್ಬರ ಲಾರಿ ಮಾಡುವುದರಿಂದ ಪ್ರಯಾಣಿಕರಿಗೆ ಎಷ್ಟು ತೊಂದರೆ ಇದೆಯೆಂಬುದನ್ನು ದಯಾಳು ಡಿ. ಯಸ್. ಪಿ. ಅವರು ವಿಚಾರಿಸಿ ಮುಂದಕ್ಕೆ ಬಸ್ಸನ್ನು ಲಾರಿ ಮಾಡಲು ಹುಕುಂ ಕೊಡಕೂಡದಾಗಿ ಪ್ರಾರ್ಥನೆ.

ಸದಾ ದೊಡ್ಡಿ ಪ್ಯಾಸೆಂಜರ್.

ಸರ್ಕಾರದವರಲ್ಲು ವಿನಂತಿ.

ಕೊಡಗಿನಲ್ಲಿ ಅನೇಕ ಪರಾಬಿನ ಅಂಗಡಿಗಳು ಇದ್ದವು. ಸರ್ಕಾರದವರು ಮದ್ಯಪಾನ ನಿರೋಧ ವಿಷಯ ಗವರ್ನಮೆಂಟಿಗೆ ತಂದು ಅಲ್ಲಲ್ಲಿ ಕೆಲವು ಪರಾಬು ಡಿಪೋಗಳನ್ನು ಇಟ್ಟಿರುವುದಾಗಿರುತ್ತದೆ. ಜನರು ಮದ್ಯಪಾನವನ್ನು ಕಡಿಮೆ ಮಾಡುವುದಕ್ಕಾಗಿ ರೇಷನ್ ಪದ್ಧತಿ ಮೇರೆ ಕೂಪನ್ ಕೊಟ್ಟು ಹಂಚುವುದಾಗಿರುತ್ತದೆ.

ಓದುಗರ ಓಲೆಗಳು

ಡಿಪೋಗಳಲ್ಲಿ ಸರ್ಕಾರದವರು ಸಂಬಳ ಕೊಟ್ಟು ಒಬ್ಬರು ಮೇನೇಜರನ್ನೂ ಒಬ್ಬ ಗುಮಾಸ್ತನನ್ನೂ ನೇಮಿಸಿರುವುದಾಗಿರುತ್ತದೆ. ಕೊಡಗಿನಲ್ಲಿ ಕೌನ್ಸಿಲ್ ಚುನಾವಣೆಯು ೧೯೫೨ನೇ ಇಸವಿ ಜನವರಿ ತಿಂಗಳಲ್ಲಿ ನಡೆಯುವುದಾಗಿ ವರ್ದಂತಿ ಇರುತ್ತದೆ. ಸಾರಾಯಿ ಡಿಪೋದ ಮೇನೇಜರು ಸರ್ಕಾರಿ ಉದ್ಯೋಗಸ್ಥರಾಗಿದ್ದು ಕೌನ್ಸಿಲ್ ಮೆಂಬರುತನಕ್ಕೆ ನಿಲ್ಲಬಹುದೇ? ಯಾ ರಜೆಯನ್ನು ತೆಗೆದುಕೊಂಡು ನಿಲ್ಲಬಹುದೇ? ಇದು ಸರ್ಕಾರದ ಕಾನೂನಿಗೆ ಸಮಂಜಸವಾಗಿದೆಯೇ? ತಾವು ರಜೆ ತೆಗೆದುಕೊಂಡು ತಮ್ಮ ತಮ್ಮನನ್ನು ಆ ಕೆಲಸಕ್ಕೆ ನೇಮಕ ಮಾಡಿರುತ್ತಾರೆ. ಇದು ನ್ಯಾಯವೇ? ಒಬ್ಬರು ಈಗಾಗಲೇ ಕೌನ್ಸಿಲ್ ಮೆಂಬರುತನಕ್ಕೆ ನಿಲ್ಲುವುದಾಗಿಯೂ ತನಗೆ ಸಹಾಯ ಕೊಡಬೇಕಾಗಿಯೂ ನಾಡಿನ ಎಲ್ಲಾ ಸ್ಥಳದಲ್ಲೂ ಪ್ರಚಾರ ಮಾಡುತ್ತಾ ಇದ್ದಾರೆ. ಅಲ್ಲದೆ ಈಗಾಗಲೇ ನಡೆದ ಮೂರು ವಿಾಟಿಂಗಿನಲ್ಲೂ ಸಹ ಚುನಾವಣೆ ವಿಷಯ ಭಾಷಣ ಮಾಡಿರುತ್ತಾರೆ.

ಇವರ ಅಂಣ ಸರಕಾರಿ ಉದ್ಯೋಗಸ್ಥರಾಗಿದ್ದು ರಜೆ ತೆಗೆದುಕೊಂಡು ತಮ್ಮನ ಪರವಾಗಿ ಕೌನ್ಸಿಲ್ ಚುನಾವಣೆ ವಿಷಯ ಪ್ರಚಾರ ಮಾಡುತ್ತಿರುತ್ತಾರೆ. ಇದು ಸರ್ಕಾರಿ ಕಾನೂನಿಗೆ ವಿರೋಧ ಎಂದು ನನ್ನ ಭಾವನೆ. ಚುನಾವಣೆಯ ಪ್ರಚಾರ ವಿಷಯ ಸರ್ಕಾರಿ ಉದ್ಯೋಗಸ್ಥರು ಕೈ ಹಾಕಬಾರದಾಗಿ ನಿಯಮ ವಿರುತ್ತದೆ. ಚುನಾವಣೆಯಲ್ಲಿ ನಿಲ್ಲಲು ಯಾ ಪ್ರಚಾರ ಮಾಡಲು ಇವರುಗಳು ತಮ್ಮಗಳ ಉದ್ಯೋಗಗಳಿಗೆ ರಾಜೀನಾಮೆ ಕೊಡಬೇಕಾಗಿತ್ತು. ಈ ಕೆಲಸಕ್ಕೆ ಇಳಿಯಬೇಕಾಗಿ ಸರ್ಕಾರದವರು ಇವರುಗಳಿಗೆ ಶೃತಪಡಿಸಬೇಕಾಗಿಯೂ ಇವರುಗಳು ಉಲ್ಲಂಘನೆ ಮಾಡಿದಲ್ಲು ಸರ್ಕಾರವು ತಕ್ಕ ಕ್ರಮ ತೆಗೆದುಕೊಳ್ಳಬೇಕಾಗಿಯೂ ಕೋರುವ. 'ಮತದಾರ'

ಇದು ದರೋಡೆಯಲ್ಲವೇ?

ಕೊಡಗಿನ ವನಸಂಪತ್ತು ಹೆಸರಾದುದು. ಸರಕಾರದ ಆದಾಯದ ಬಹುಭಾಗವು ಫಾರೆಸ್ಟಿನಿಂದ ಬರುತ್ತದೆ. ಆದರೆ ಕೊಡಗು ಫಾರೆಸ್ಟ್ ಇಲಾಖೆಯವರು ಇದರ ಜೋಪಾದ ಬಗ್ಗೆ ಹೆಚ್ಚು ನಿಗ ವಹಿಸಿದಂತೆ ತೋರುವುದಿಲ್ಲ. ಕಾಡುಗಳನ್ನು ಕಡಿದು ಮರ ಮೂರಾಟದ ಲೂಟಿ ತಡೆಯಿಲ್ಲದೆ ನಡೆಯುತ್ತಿದೆ. ಅದರ ಜೊತೆಯಲ್ಲಿ ಕೊಡಗಿನ ವನಸಂಪತ್ತಿನ ಸೂರೆ ಹೇಗೆ ಆಗುತ್ತಿದೆಯೆಂಬುದನ್ನು ಇಲ್ಲಿ ವಿವರಿಸುವೆ. ಮರೆನಾಡಿನಿಂದ ಹಿಡಿದು ತಡಿಯಂಡಮೋಳ್ ಹೆಟ್ಟೆ, ಕರಿಕೆ, ಪಟಿಂಡ್ರೋಟ್, ಸಂಪಾಜೆಯ ಈಚಲ್ಕಿವರೆಗೆ ಬೆಟ್ಟ ಸಾಲು ಇದೆ. ಈ ಪರ್ವತಸಾಲಿನಿಂದ ಸೆರೆ ರಾಜ್ಯದವರು ಅಗಣಿತ ಬೆಲೆಯ ವಸ್ತುಗಳನ್ನು ಅಪಹರಿಸುತ್ತಿದ್ದಾರೆ. ಗೇಣಿ ಮೇಲೆ ಕಾಡುಗಳಿಗೆ ಒತ್ತಾಗಿರುವ ಮಲಬಾರಿನವರು, ಸೀಗೆ, ಧೂಪ, ಮರ ಎಣ್ಣೆ, ಜೇನು ಬೆತ್ತ ಮೊದಲಾದುವನ್ನು ಲೂಟಿ ಮಾಡುತಿದ್ದಾರೆ. ಧೂಪದ ಮರಗಳನ್ನು ಎಣ್ಣೆ ಮರಗಳನ್ನು ಕಡಿದು ವಾರ ವಾರ ಈ ಅಮೂಲ್ಯ ವಸ್ತುಗಳನ್ನು ಸಂಗ್ರಹಿಸುತ್ತಾರೆ ಕಳೆದ ವರ್ಷ ಕಾಡು ಒಳ್ಳೇ ಮೆಣಸನ್ನು ಸಂಗ್ರಹಿಸಿ ಮೂರಾಟ ಮಾಡಿದ್ದಿದೆ. ಹೀಗಾಗಿ ಗೇಣಿ ಮೇಲೆ ಹರಾಜಿನಲ್ಲಿ ಪಡೆದವರಿಗೂ ನಷ್ಟವಾಗುತ್ತಿದೆ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಈ ವಿಚಾರದಲ್ಲಿ ಹೆಚ್ಚಿನ ಲಕ್ಷ ವಹಿಸಬೇಕು.

ಎ. ಪೂವಯ್ಯ.

ಆಲೂರು ಸಿದ್ದಾಪುರ ಶಾಲೆ

ಶನಿವಾರಸಂತೆ ಹೋಬಳಿ ರೀ ಜನರೇಷನ್ ಏರ್ಪಡ ಆಲೂರು ಸಿದ್ದಾಪುರ ಗ್ರಾಮಸ್ಥರು ಈಗ ಒಂದು ಶಾಲೆಯನ್ನು ಈ ಪ್ರಾಂತ್ಯದ ಜನರೆ ಸೇರಿ ಸ್ವಂತ ಖರ್ಚಿನಿಂದ ಶಾಲಾ ಕಟ್ಟಡವನ್ನು ಕಟ್ಟಿಸಿ ಸ್ವಂತ ಖರ್ಚಿನಿಂದ ಒಬ್ಬ ಅಧ್ಯಾಪಕರನ್ನು ನೇಮಿಸಿ ಈ ಹಿಂದಿನಿಂದಲೂ ಶಾಲೆಯನ್ನು ನಡೆಸಿಕೊಂಡು ಬಂದೆವು. ಈ ಶಾಲೆಯನ್ನು ಸಂದರ್ಶಿಸಿದ ಶಾಲಾ ಅ. ಎ ಜ್ಯುಕೇಶನಲ್ ಆಫೀಸರೂ, ಶಾಲಾ ಸುಪರ್‌ವೈಸರೂ, ಅ. ಕಮಿಷನರ್ ಸಾಹೇಬರೂ, ಮೆಡಿಕಲ್ ಆಫೀಸರೂ ಅಲ್ಲದೆ ಇತರ ಅಧಿಕಾರಿಗಳೂ ಸಹ ತಮ್ಮ ಇನ್ಸ್‌ಪೆಕ್ಷನ್ ನೋಟು ಬುಕ್ಕಿನಲ್ಲಿ ಶಾಲೆಯ ಏಳಿಗೆ ಮತ್ತು ವಿದ್ಯಾರ್ಥಿಗಳ ಸಂಖ್ಯೆಯ ಏರುವಿಕೆ ವಗೈರೆ ಎಲ್ಲಾ ವಿಷಯಗಳನ್ನು ಹೊಗಳಿರುವುದಲ್ಲದೆ ಈ ಶಾಲೆಯನ್ನು ಒಂದು ಗ್ರಾಂಟು ಶಾಲೆಯಾಗಿ ತೆಗೆದುಕೊಳ್ಳಬಹುದೆಂದು ಬರೆದಿರುತ್ತಾರೆ. ನಾವು ಈ ಶಾಲಾ ಪಂಚಾಯತಸ್ಥರು ಸೇರಿ ಅಧಿಕಾರಿಗಳಿಗೆ ಪತ್ರದ ಮೂಲಕವೂ, ಖುದ್ದಾಗಿಯೂ, ಮನವಿ ಮಾಡಿಕೊಂಡರೂ ಈ ವರೆಗೆ ಈ ಶಾಲೆಯನ್ನು ಗ್ರಾಂಟು ಶಾಲೆಯಾಗಿ ತೆಗೆದುಕೊಂಡಿಲ್ಲ. ಸುಮಾರು ಒಂದು ಸಾವಿರ ಜನರು ಇರುವ ಈ ಪ್ರಾಂತ್ಯದಲ್ಲಿ ಒಂದಾದರೂ ಜಿಲ್ಲಾ ಬೋರ್ಡ್ ಶಾಲೆಯಿಲ್ಲ. ಈ ಶಾಲೆಯಲ್ಲಿ ೬೦ ವಿದ್ಯಾರ್ಥಿಗಳ ಸಂಖ್ಯೆ ಇದೆ. ಇವರಲ್ಲದೆ ಸಾಧಾರಣ ೫೦ ರವರೆಗೆ ವಿದ್ಯಾರ್ಥಿಗಳು ಶಾಲಾ ಉಪಾಧ್ಯಾಯರ ಸಂಬಳ ಕೊಡಲು ಅಶಕ್ತರಾದ್ದರಿಂದ ತಂಲೆಗೆ ಬರುತ್ತಿಲ್ಲ ಕೂಡಲೇ ಈ ಶಾಲೆಯನ್ನು ಡಿ. ಬೊ. ಇಲ್ಲವೇ ಗ್ರಾಂಟು ಶಾಲೆಯಾಗಿ ತೆಗೆದುಕೊಂಡಲ್ಲಿ ೧೦೦–೧೨೦ ವಿದ್ಯಾರ್ಥಿಗಳ ಸಂಖ್ಯೆ ಏರುವುದು. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಒಡನೆ ಈ ಪ್ರಾಂತ್ಯದ ಶಾಲೆಯ ಕಡೆಗೆ ಮನಸಿಟ್ಟು ಈ ಶಾಲೆಯನ್ನು ಡಿಸ್ಟ್ರಿಕ್ಟ್ ಬೋರ್ಡ್ ಶಾಲೆಯಾಗಿ ತೆಗೆದುಕೊಳ್ಳುವರಾಗಿ ಆಶಿಸುವ.

ಜೇನಂಡ ಕಾಳಪ್ಪ.

ರೀಜನರೇಷನ್ ಏರ್ಪಡ ಬಸ್ ಲೈನು

ಕೊಡಗಿನಲ್ಲಿ ಶನಿವಾರಸಂತೆ ಹೋಬಳಿ ರೀ–ಜನರೇಶನ್ ಏರ್ಪಾವು ಒಂದು ಅಂಡಮೂನ್. ಇಲ್ಲಿಗೆ ನಮ್ಮ ಈ ಪ್ರಾಂತ್ಯದ ಮತ್ತು ಹೊರಪ್ರಾಂತ್ಯದ ಸುಮಾರು ನೂರಾರು ಜನರು ಸೇರಿ ಈಗ ೩ ವರ್ಷದ ಹಿಂದೆ ಒಂದು ಬಸ್ ಲೈನು ಬೇಕೆಂದು ಚೀಫ್ ಕಮಿಷನರ್ ಸಾಹೇಬರವರಿಗೆ ಅರ್ಜಿ ಬರಕೊಂಡಿದ್ದಲ್ಲದೆ ಸುಮಾರು ೧೦, ೧೫ ವರ್ಷಗಳಿಂದಲೂ ನಾವು ಈ ಪ್ರಾಂತ್ಯದಲ್ಲಿ ಒಂದು ಬಸ್ ಲೈನು ಕೇಳುತ್ತಾ ಬಂದಿದ್ದೇವೆ. ಕೊಡ್ಲಿಪೇಟೆಯಿಂದ, ಶನಿವಾರಸಂತೆ, ಆಲೂರು, ಬಾಣಾವರ, ಹೆಬ್ಬಾಲೆ ಮಾರ್ಗವಾಗಿ ಮಡಿಕೇರಿಗೆ ಒಂದು ಮೆಟ್ಲಿಂಗು ರಸ್ತೆ ಇದೆ. ನಾವು ಬಸ್ಸು ಲೈನು ಕೇಳಿದ ಸಮಯದಲ್ಲಿ ೧–೨ ಮೈಲು ಮೆಟ್ಲಿಂಗ್ ಸರಿಪಡಿಸುವುದು ಮತ್ತು ಜಲ್ಲಿ ಒಡೆಯುವುದು ವಗೈರೆ ಕೆಲಸಗಳು ನಡೆಯುವಾಗ ಇಂದೋ ನಾಳೆಯೋ ಬಸ್ ಲೈನು ಬರಬಹುದೆಂಬ ಕುತೂಹಲ ಇಲ್ಲಿಯವರಿಗೆ ಇತ್ತು. ಆದರೆ ಪ್ರಯೋಜನವಾಗಲಿಲ್ಲ. ಚೀಫ್ ಕಮಿಷನರ್ ಸಾಹೇಬರವರು ಈ ಸಾಲಿನ ಡಿಸೆಂಬರ್ ಮತ್ತು ಜುಲೈ ತಿಂಗಳ ಸಮಯದಲ್ಲಿ ಈ ಪ್ರಾಂತ್ಯವನ್ನು ಸಂದರ್ಶಿಸಿದ ಸಮಯದಲ್ಲಿ ಬಸ್ ಲೈನಿನ ವಿಷಯ ಮನವಿ ಮಾಡಿಕೊಂಡೆವು. ತಕ್ಷಣದಲ್ಲಿಯೇ ಬಸ್ ಲೈನಿನ ಏರ್ಪಾಡು ಮಾಡುತ್ತೇವೆಂಬ ಭರವಸೆ ಸಹ ಇತ್ತರು. ಈ ವರೆಗೆ ಯಾವುದೂ ಕಾಣುವುದಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ನಾಡಿನ ಪ್ರಯಾಣ ಮತ್ತು ವ್ಯಾಪಾರ ವಗೈರೆ ಅನುಕೂಲತೆಗಾಗಿ ಮಡನೆ ಬಸ್ ಲೈನು ತೆರೆಯುವ ಏರ್ಪಾಡು ಇಂದಾದರೂ ಮಾಡುವರೇ?

ಈ ನಾಡಿನ ಪ್ರಯಾಣಿಕ.

ಇದು ಯಾರ ಭಾಗ್ಯ?

ನಿರಾಶನಾಗಿರುವುದೇ ಕಡೆಗೂ ದೊರೆತ ಬಡವನ ಭಾಗ್ಯ! ನಿರಶನದಿಂದ ನಿತ್ಯವನ್ನು ಕಳೆಯುವುದು ಮತ್ತೊಂದು ಭಾಗ್ಯ! ಇವೆರಡು ಭಾಗ್ಯಗಳು ಬಡವನ ಬಾಳ್ವೆಯಲ್ಲಿ ನಿರಂತರ ನಿಂತಿರುವುದೇ ಬಡವನು ಬಡವನಾಗಲು ನೆಲಗಟ್ಟು.

ಬಡಜನತೆಯ ಹಿತವೇ ನಮ್ಮ ಹಿತವೆಂದು ಹೇಳುವುದು ಸರಕಾರದ ಮೂತಾಗಿದೆ. ಬಡ ಜನತೆಯನ್ನು ಹಿಡಿದೆತ್ತಿ ತಮ್ಮ ಸ್ವಾರ್ಥತೆಯನ್ನು ಗಳಸಿ, ರಾಜಕೀಯ ರಂಗದಲ್ಲಿ ಕಾಣಿಸುವುದು ಜನತಾ ಪ್ರತಿನಿಧಿ, ದೇಶಸೇವಕನ ಮೊದಲ ಕರ್ತವ್ಯ. ಎಲ್ಲರೂ ಬಾಹ್ಯವಾಗಿ ಬಡವನ ಏಳಿಗೆಗೆ ಬಹುವಾಗಿ ಮಾತಾಡುವರು. ಸರಕಾರವು ಬಡವರೋದ್ಧಾರವೇ ದೇಶದ ಅಭ್ಯುದಯವೆಂದು ಸಾರುತ್ತಿದೆ.

ದೇಶದಲ್ಲಿ ತಲೆದೋರಿರುವ ಆಹಾರಾಭಾವವನ್ನು ತಡೆಗಟ್ಟಿ ಸಂಭಿಕ್ಷವನ್ನಾಗಿ ಮಾಡಲು ಮತ್ತು ಜನತೆಯ ಆರೋಗ್ಯವನ್ನು ಕಾಪಾಡಲು ಹಲವಾರು ಸಂಘ ಸಂಸ್ಥೆಗಳು ತಲೆಎತ್ತಿದುವು ಮತ್ತು ಈಗಲೂ ಸ್ಥಾಪನೆಯಾಗುತ್ತಲಿವೆ. ಎರಡರ ಸಾಧನೆಯನ್ನು ಕುರಿತು, ಬಡವರ ಮೇಲೆ ಬಣ್ಣಗಟ್ಟಿ ಪ್ರಕಟಣೆಗಳು ಸಾರುತ್ತಿವೆ. ಎಲ್ಲರೂ ಎದುರಿಗೆ ಬಡವನ ಹಿತಚಿಂತನೆಯನ್ನು ಪ್ರದರ್ಶಿಸಿದರೂ ಬೆಂಗಡೆಯಿಂದ ತಮ್ಮ ಸ್ವಾರ್ಥಕ್ಕಾಗಿ ಬಡವನ ಮೇಲೆ ಕತ್ತಿಕಟ್ಟುತ್ತಿರುವುದು ಎಲ್ಲೆಲ್ಲೂ ಕಂಡುಬರುತ್ತಿದೆ ಉದ್ಯೋಗಸ್ಥರಿಗೆ ಬಡನಾಡಿಗರ ಸಂದರ್ಶನವೆಂದರೆ ಜಿಗುಪ್ಸೆಯೂಗುವುದು. ಆತನ ಹಿತಚಿಂತನೆಯನ್ನರಿತು ವರ್ತಿಸದೆ, ಅವರ ಆಸೆಯನ್ನೂ ನೆರವೇರಿಸದೆ, ಬಡವರನ್ನ ತುಳಿಯುವುದು ನಿಜವೆಂದು ನಾನು ಹೇಳಿದರೂ ಸಂಬಲಾರರು. ಬದಲು ಹೀಗೆ ಬರೆದವನಾರೆಂದು ನನ್ನ

ಪ್ಪು ಹೊಡುಕಿ, ನನ್ನ ಮೇಲೆ ವಕ್ರದೃಷ್ಟಿಯನ್ನು ಬೀರದೇ ಇರಲಾರರೆನ್ನುವುದಕ್ಕೆ ನನಗೆ ಈಗಾಗಲೇ ಹಲವು ನಿದರ್ಶನಗಳು ದೊರೆತ್ತಿವೆ.

ಹಿಂದೂಸ್ಥಾನವೇ ಆಹಾರಭಾವದಲ್ಲಿ ಸಿಲುಕಿ ಬೆಂದುಹೋಗಿದೆ! ಆಹಾರದ ಅಭಾವವನ್ನು ಕುರಿತು 'ಹೆಚ್ಚು ಬೆಳೆಯಿರಿ' ಎಂಬ ಸ್ಕೀಮ್ ತೆರೆಯಲ್ಪಟ್ಟು ಸಾಧಿಸಿದ್ದೇನು? ಕಾಯಿಡೆಯು ಯೋಗ್ಯವಾಗಿದ್ದರೂ ನಿರ್ವಹಿಸುವವರು ಅಯೋಗ್ಯರಾದ ಮೇಲೆ ನಮಗೆ ಅದರಿಂದ ದೊರಕುವ ಪ್ರತಿಫಲವೂ ಅಷ್ಟೆ! ವ್ಯವಸಾಯ ಇಲಾಖೆಯು ತೆರೆಯಲ್ಪಟ್ಟು 'ಹೆಚ್ಚು ಬೆಳೆಯಿರಿ' ಎಂಬುದಕ್ಕೆ 'ಕಂಪೋಸ್ಟು' ಸ್ಕೀಮ್ ತೆರೆದು ಅಷ್ಟು ಗೊಬ್ಬರ ಹಾಕಿತು. ಅಲ್ಲೂ, ಇಲ್ಲೂ ಬೀದಿಗಳಲ್ಲೂ, ಸಂದಿಗಳಲ್ಲೂ ಪ್ರಕಟಣಾಪತ್ರಗಳೂ ಅಂಟಿಸಲ್ಪಟ್ಟವು. ಊರ ಹೊರಗಿಳಿ ರಸ್ತೆಯ ಸಮೀಪ 'ಕಂಪೋಸ್ಟು' ಹೊಂಡವನ್ನು ತೋಡಿದರೂ ಹಲ ಕೆಲವು ಶ್ರೀಮಂತ ಬಂಧುಮಿತ್ರರಿಗೆ ಬಹುಮಾನ ಹಂಚಲ್ಪಟ್ಟಿತು. ಹೆಚ್ಚು ಬೆಳೆಯಿರಿ ಎಂಬುದು ಹೆಚ್ಚು ತಿಂದು ಬೆಳೆಯಿರಿ ಎನ್ನುವ ಮಟ್ಟಕ್ಕೆ ಇಳಿಯಿತು. ಅಷ್ಟರಲ್ಲಿ 'ರೇಷನ್' ಕುಪ್ಪಳಿಸಿ ಮನೆಬಾಗಿಲಿಗೆ ಬಂದು ನಿಂತಿತು. ಕಂಟ್ರೋಲು, ಬ್ಲಾಕ್ ಮಾರ್ಕೆಟ್, ಅಂಗಡಿಯ ಬಾಗಿಲ ಮುಂದೆ ಕಬ್ಬಿಣದ ಪರದೆಯಷ್ಟೆಳೆಯಿತು. ಆದರೆ ಇದರಲ್ಲಿ ನೊಂದವರು, ಬೆಂದವರು ಯಾರು? ಬಡಪರು. ಅದರಲ್ಲೂ ನಾಡಿನ ಬಡ ಜನತೆಯಲ್ಲವೆ? ನಾಡು ಎಂದಾಗ ಶ್ರೀಮಂತತನದ ಅಗರವೆ? ಅಥವಾ ನಾಡಿನಜೀವಿಗಳೆಲ್ಲಾ ಸ್ವಾವಲಂಭಿಗಳೆನ್ನುವುದೆ? ಇಲ್ಲ. ಕಂಡಿತವಾಗಿಯೂ ನಾಡಿನ ಪ್ರಸ್ತುತ ಸಮಯವು ಕಠೋರವಾಗಿದೆ. ಆಹಾರ ವಿಷಯದಲ್ಲಿಯೂ, ಜೀನಸು ಮೊದಲಾದ ದೈನಂದಿನ ಸಾಮಾನುಗಳಿಗೆ ಒಂದಕ್ಕೆರಡರಷ್ಟು ಕೊಟ್ಟು ಆತನ ಹಳ್ಳಿಯ ವಿಪರೀತ ಧಾರಣೆಯು ಚಿಲ್ಲರೆ ಅಂಗಡಿಯಿಂದ ಪಡೆಯುವನು. ಊರಿನಲ್ಲಿರುವ ಒಂದೆರಡು ಶ್ರೀಮಂತರನ್ನು ಬಿಟ್ಟು ಬಡ ಜನತೆಯು ಪರಿಸ್ಥಿತಿಯು ಅಸಹನೀಯವಾಗಿದೆ.

ಹಿಂದೊಮ್ಮೆ ಪತ್ರಿಕೆಯಲ್ಲಿ ನಾಡಿನಜೀವನಾಡಿ ಸಡಿಲವಾಗಿದೆಯೆ? ಎಂಬ ಪ್ರಮುಖ್ಯ ವಿಷಯವನ್ನು ಯಾರೋ ಬರೆದಿರುವುದನ್ನೊ ಓದಿ ನೋಡಿದೆ. ಆದರಲ್ಲಿ ಕೇವಲ ಕೆಲವು ವಿಷಯಗಳು ಮಾತ್ರ ಬರೆದಿದೆ ಎಂದು ನಾನು ಹೇಳಲೇಬೇಕಾಗಿದೆ. ಇಂದಿಗೆ ನಾಡಿನ ಏಳಿಗೆಗೆ ರೈತನ ನೆರವಿಗೆ ಹೆಚ್ಚಿಗೆ ಪ್ರಧಾನವಾದ ಸಂಸ್ಥೆ ಎಂದರೆ ರೆವಿನ್ಯೂ ಇಲಾಖೆ. ಇಂಥಾ ಪ್ರಯೋಜನದಾಯಕ ಇಲಾಖೆಯು ರೈತನಿಗೆ ಹೆಚ್ಚಿಗೆ ಪ್ರಯೋಜನವನ್ನೂ ಮಾಡದೆ, ಕರಕೊಂದಾಯವನ್ನು ಹೆಚ್ಚಿಗೆ ವಸೂಲುಮಾಡುವುದರಲ್ಲಿಯೇ ಕಾಲಹರಣ ಮಾಡುತ್ತಿದ್ದಲ್ಲಿ ರೈತನ ಗತಿ ಏನಾಗಬೇಕು? ರೆವಿನ್ಯೂ ಇಲಾಖೆಯಿಂದ ಬಡವರಿಗೆ ಹಿತವಾಗುತ್ತಿಲ್ಲ. 'ಹೆಚ್ಚು ಬೆಳೆಯಿರಿ ಸೈಸಾರಿ ಸ್ಥಳಗಳನ್ನು ಕಾಯಿಸುದಾರರಿಗೆ ಮಂಜೂರು ಮಾಡುವೆ'ವೆಂದು ಮೇಲಾಧಿಕಾರಿಗಳು ಹೇಳುತ್ತಿದ್ದಾರೆ. ಆದರೆ ಆ ಮಾತಿನ ಭರವಸೆಯಾಗಿ ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಅರ್ಜಿ ಮೂಡಿದ್ದಲ್ಲಿ ತಿರಸ್ಕಾರವಲ್ಲದೆ ಪುರಸ್ಕಾರವಿಲ್ಲ. ಇಲ್ಲದಿದ್ದಲ್ಲಿ 'ಕೊರ'ಗಳೆಂಬ ಬಿಚ್ಚಿದ ಕಂತೆಯು ಸಾಧ್ಯವಾದಷ್ಟು ಕಾಡುವುದು. ಇದರಲ್ಲಿಯೂ ಶಿಪಾರಸ್ಸು ಹೊಂದಿದ 'ಪೇಪರು' ಅದೃಶ್ಯವಾಗುವುದು ಇದೆಯಂತೆ! ಇಷ್ಟರಲ್ಲಿ ಇದು ಪಾರುಪತ್ಯಗಾರರಿಂದ ಮೇಲಾಧಿಕಾರಿ ಸಹಿದಾರರಲ್ಲಿಗೆ 'ಪ್ರಾಪರ್ ಚಾನಲ್' ಪ್ರಕಾರಹೋಗುವುದಂತೆ! 'ಕೊರ'ಗಳೆಂಬ ಭೀಕರ ಬಾಣಗಳ ಛನಸ್ಸುಧಾರಿ ತಾಲೋಕು ಸುಭೆದಾರರೆಂದು ಇತ್ತೀಚೆಗೆ ಸಂಸ್ಥೆಯ ಒಳಗುಟ್ಟನ್ನು ತಿಳಿದ ನನ್ನಂತವನಿಗೆ ತಿಳಿಯಿತು. ಸುಭೆದಾರರೇ ರೆವಿನ್ಯೂ ಡಿಪಾರ್ಟ್‌ಮೆಂಟಿನ ಸೂತ್ರಪುರುಷ. ಆದ್ದರಿಂದ ಸುಭೆದಾರರನ್ನು ಸಂದರ್ಶಿಸದಿದ್ದಲ್ಲಿ ಕಾರ್ಯನಿಷ್ಪಲವೆಂದು ಮೊನ್ನೆ ಶ್ಯಾನುಭೋಗರು ಸಹ ಒತ್ತಾಯಮಾಡಿದರು. ಈ ವಿಷಯಗಳನ್ನು ಸುಮಸ್ತ ಸಾರ್ವಜನಿಕರಿಗೆ ತಿಳಿಯಲೋಸುಗ ಬರೆದಿರುವುದಾಗಿದೆ. ಇನ್ನು ಮುಂದೆಗೂ ರೆವಿನ್ಯೂ ಸಂಸ್ಥೆಯ ಬಗ್ಗೆ ಸಾಕಷ್ಟು ಸಾಕ್ಷ್ಯಗಳನ್ನು ಕೊಟ್ಟು ವಾದಿಸುವುದೇ ನನ್ನ ಈ ಪೃಥಮ ಲೇಖನದ ಉದ್ದೇಶವಾಗಿದೆ. ಹತ್ತು ವರ್ಷದಿಂದ 'ಪೆಂಡಿಂಗ್'ನಲ್ಲಿ ಕೊಳೆತ ಪೇಪರುಗಳೂ ಬೇಕಾದಷ್ಟಿವೆ! 'ಹೆಚ್ಚು ಬೆಳೆಯಿರಿ' ಎಂದೆನ್ನುವುದು ಸರಕಾರ! ಜಾಗಕೊಡದಿರುವುದು ಸರಕಾರ! ಇದು ಯಾವ ನೀತಿ? ಈ ಸಂಸ್ಥೆಯು ಮೇಲಾಧಿಕಾರಿಗಳು ಕೆಳಗಿನ ನೌಕರರನ್ನು ವಿಚಾರಿಸುವುದಿಲ್ಲವೇ? ಅವರು ನ್ಯಾಯಪೂರ್ಣವಾಗಿ ವಿಚಾರಣೆ ಮಾಡುವುದಾದರೆ 'ರೆವಿನ್ಯೂ' ಸಂಸ್ಥೆಯ ವಿಷಯ ಕೂಗು ಕೇಳಿ ಬರುವುದಕ್ಕೆ ಅವಕಾಶವಿದ ದೊರಕುತಿತ್ತೆ? ಈ ವಿಷಯವಾಗಿ ಕೌನ್ಸಿಲ್‌ನಲ್ಲಿ ಪ್ರಶ್ನೆ ನಡೆಯುವುದಿಲ್ಲವೆ? ಕೌನ್ಸಿಲ್ ಹೆಂಬರುಗಳಿಗೆ ಸವಾಲು ಕೇಳಲು ನಾಳು ಈಗಾಗಲೇ ತಯಾರಿಸಿದ ಪ್ರಶ್ನೆಯ ಸುರುಳಿಯನ್ನು ಕಂಡಿತವಾಗಿಯೂ ಕಳುಹಿಸುವೆನು. ಇಲ್ಲದಿದ್ದರೆ ಹೆಚ್ಚು ಬೆಳೆಯನ್ನು ಎಲ್ಲಿ ಬೆಳೆಸುವುದೆಂದು ಹೇಳಲಿ? ಗೋಡೆಗಳ ಮೇಲೆ ಪ್ರಕಟಣಾಪತ್ರಿಕೆಗಳ ಮೇಲೆಯೋ? ಅಥವಾ ವೃತ್ತಪತ್ರಿಕೆಗಳ ಮೇಲೆ ಬೆಳೆಸುವುದೋ? ಅಧಿಕಾರಿಗಳು ಸಾರ್ವಜನಿಕ ಸಭೆಗಳಲ್ಲಿ ಮಾಡುವ ಭಾಷಣಗಳಿಂದಲೋ?

'ಮುಕುಂದ.'

ಪಾಕಿಸ್ತಾನದ ಮುಖ್ಯ ಮಂತ್ರಿ ಲಿಯೂಖತ್ ಆಲಿಖಾನರ ಅಮಾನುಷ ಕೊಲೆ.

ತಾರೀಕು ೧೬ರ ಮಧ್ಯಾಹ್ನ ಪಾಕಿಸ್ತಾನದ ಮುಖ್ಯ ಮಂತ್ರಿ ಲಿಯೂಖತ್ ಆಲಿಖಾನರನ್ನು ರಾವಲ್ಪಿಂಡಿಯಲ್ಲಿ ಗುಂಡಿಕ್ಕಿ ಕೊಲ್ಲಲಾಯಿತು. ಸ್ಥಾನಿಕ ಮುಸ್ಲಿಂ ಲೀಗಿನ ವತಿಯಿಂದ ಸೇರಿದ ಸಭೆಯಲ್ಲಿ ಲಿಯೂಖತ ಆಲಿಖಾನರು ಮಾತಾಡುವವರಿದ್ದರು. ಸುಮಾರು ಇಪ್ಪತ್ತು ಸಾವಿರ ಜನರು ಕೂಡಿದ್ದ ಸಭೆಗೆ ಲಿಯೂಖತರು ೩-೪೫ಕ್ಕೆ ಆಗಮಿಸಿದರು. ಸ್ವಾಗತಪರ ಭಾಷಣಗಳು ನಡೆದ ನಂತರ ಲಿಯೂಖತರು ಸಭೆಯನ್ನುದ್ದೇಶಿಸಿ ಮೂತ ನಾಡಲು ಎದ್ದು ಕೆಲವೇ ಶಬ್ದಗಳನ್ನುಚ್ಚರಿಸಿದ್ದರು. ಅಷ್ಟರಲ್ಲಿಯೇ ಅವರ ಮೇಲೆ ಎರಡು ಬಾರಿ ಗುಂಡುಗಳನ್ನು ಹಾರಿಸಲಾಯಿತು. ಗುಂಡು ಹಾರಿಸಿದವನ ಹೆಸರು ಸಯ್ಯದ ಅಕ್ಬರನೆಂದೂ ಅವನು ಹಸ್ಸಾರಾದವನಿರುವನೆಂದು ತಿಳಿದು ಬಂದಿದೆ.

ಲಿಯೂಖತರ ಮೇಲೆ ಹಾರಿಸಿದ ಎರಡೂ ಗುಂಡುಗಳು ಎದೆಗೆ ತಗಲಿದ್ದು ಅವರನ್ನು ಒಮ್ಮೆಲೇ ಸಂಯುಕ್ತ ಮಿಲಿಟರಿ ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿ ಅವರಿಗೆ ರಕ್ತದಾನವನ್ನು ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ. ಅನಂತರ ಕೆಲವೇ ಹೊತ್ತಿನಲ್ಲಿ ಅವರು ತೀರಿಕೊಂಡರು. ಕೊಲೆಗಡುಕ ಸಯ್ಯದ್ ಅಕ್ಬರನನ್ನು ರಿವಾಲ್ವರ್ ಕೈಯ್ಯಲ್ಲಿದ್ದ ಹಾಗೆಯೇ ಜನರ ಗುಂಪು ಅಲ್ಲಿಯೇ ಕೊಂದುಬಿಟ್ಟಿತು.

ಲಿಯೂಖತರ ಹುರಣದ ಸುದ್ದಿಯು ಕರಾಚಿಗೆ ಬಂದ ಕೂಡಲೇ ಪಾಕಿಸ್ತಾನದ ಮಂತ್ರಿಮಂಡಲವು ಅವಸರದ ಸಭೆ ಸೇರಿ ೩೦ ದಿನಗಳ ವರೆಗೆ ಆಚರಿಸಲಾಗುವುದೆಂದು ತಿಳಿದು ಬಂದಿದೆ. ಪಾಕಿಸ್ತಾನದಲ್ಲಿ ೩೦ ದಿನಗಳ ಹರೆಗೆ ರಾಷ್ಟ್ರೀಯ ಬಾವುಟವನ್ನು ಅರ್ಧದ ವರೆಗೆ ಇಳಿಸಲಾಗಿತ್ತು.

" ಲಿಯೂಖತರ ಮೃತ ಶರೀರವನ್ನು ತಾ|| ೧೬ರ ರಾತ್ರಿ ಕರಾಚಿಗೆ ತಂದು ಮರು ದಿನ ಮಧ್ಯಾಹ್ನ ಅಂತ್ಯಕ್ರಿಯೆಯು ನಡೆಯಿತು. ಅವರನ್ನು ಮಹಮ್ಮದಾಲಿ ಜಿನ್ನರವರ ಪಕ್ಕದಲ್ಲಿ ಸಂಸ್ಕಾರ ಮಾಡಲಾಯಿತು.

ಈಗ ಪಾಕಿಸ್ತಾನ ಮುಖ್ಯ ಮಂತ್ರಿಯಾಗಿ ಹಿಂದಿ ಗವರ್ನರ್ ಜನರಲ್ ಆಗಿದ್ದ ಜ|| ನಾಝಿಮುದ್ದೀನರನ್ನು ನೇಮಿಸಲಾಗಿದೆ. ಗವರ್ನರ್ ಜನರಲ್ಲರಾಗಿ ಹಿಂದಿನ ಆರ್ಥಿಕ ಮಂತ್ರಿ ಗುಲಾಮ್ ಮಹಮ್ಮದರನ್ನು ನೇಮಿಸಲಾಗಿದೆ.

ವಿಧವೆಯೂಡ ಬೇಗಂ ಲಿಯೂಖತ್ ಆಲಿಯವರಿಗೆ ಮಾಸಿಕ ೨೦೦೦/- ರೂ ವೇತನವನ್ನೂ, ಉತ್ತಮ ಬಂಗ್ಲೆಯೊಂದನ್ನೂ ಪಾಕಿಸ್ತಾನ ಸರಕಾರ ಏರ್ಪಡಿಸಿದೆಯಲ್ಲದೆ ಅವರ ಇಬ್ಬರು ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿಯನ್ನೂ ಸರಕಾರ ವಹಿಸಿಕೊಂಡಿದೆ.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮುಖ್ಯ ಖಚೇರಿ:-ಹೊಸಪೇಟೆಯಲ್ಲಿ.

52-25 ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:--LIFE, FIRE, MOTOR and MARINE.

ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.

ಶ್ರೀಮಂಗಲನಾಡು ಸಹಕಾರಿ ಬ್ಯಾಂಕು ಲಿಮಿಟೆಡ್,
ಹುದಿಕೇರಿ.

ಬ್ಯಾಂಕಿನ ಬಡ್ಡಿಯ ದರವನ್ನು ಈ ಕೆಳಗಿನಂತೆ ಏರಿಸಲಾಗಿದೆ.

ಎಲ್ಲಾ ಡಿಪಾಜಿಟ್ಟುಗಳನ್ನು ಅಂಗೀಕರಿಸಲಾಗುತ್ತೆ.

೧ ವರ್ಷದ ನಿರಖು ಶೇವಣಾತಿಗೆ—		....	೨½%
೨ ವರ್ಷದ	—	....	೩%
೩ ,,	—	....	೩½%
೪ ,,	—	....	೪%
೫ ,,	—	....	೫%
೫ ವರ್ಷದ ಮೇಲ್ಪಟ್ಟು ಡಿಪಾಜಿಟ್ಟಿಗೆ—		....	೫½%

ಹೆಚ್. ಸಿ. ನಂಜಪ್ಪ,
ಗೌ. ಕಾರ್ಯದರ್ಶಿ.

4-4

ಶ್ರೀ ಕೆ. ಯಂ. ಮೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಸೋಮವಾರಪೇಟೆ ನಾಡಿನ ಜನತೆಯಲ್ಲಿ ಒಂದು ವಿನಂತಿ.

ಹಲವಾರು ವರ್ಷಗಳಿಂದ ಕೊಡಗಿನ ಕಾಂಗ್ರೆಸ್ಸಿನಲ್ಲಿ ಎರಡು ಪಕ್ಷಗಳು ಉಬ್ಬಿ ವಿಸಿರುವುದು ಎಲ್ಲರಿಗೂ ತಿಳಿದ ವಿಚಾರ. ಕೊಡಗನ್ನು ಎಂದಿನಂತೆ ಪ್ರತ್ಯೇಕವಿರಿಸಿ ನಮ್ಮ ದೇಶದ ಅಹಳಿತೆಯನ್ನು ನಾವೇ ನಿರ್ವಹಿಸಲು ಸಾಧ್ಯತೆಯಿದೆಯೆಂಬು ದೊಂಹು ತಂಡ. ಹಾಗೂ ಕೊಡಗನ್ನು ನೆರೆ ಪ್ರಾಂತಗಳಾದ ಮೈಸೂರು ಇಲ್ಲವೆ ಕರ್ನಾಟಕಕ್ಕೋ ಸಂಯೋಜಿಸಬೇಕೆಂಬ ಹವಣಿಕೆಯಲ್ಲಿರುವ ಇನ್ನೊಂದು ಪಂಗಡ. ಹೀಗೆ ಪಕ್ಷ ಪ್ರತಿಪಕ್ಷಗಳ ಮಧ್ಯೆ ಕೊಡಗಿನ ಭವಿತವ್ಯವು ಬೃಹತ್ತಮಸ್ಸೆಯಾಗಿ ನಮ್ಮ ಮುಂದೆ ನಿಂತಿದೆ. ಆದರೆ ಕೇಂದ್ರ ಸರಕಾರದವರು ನಮ್ಮ ದೇಶದ ಭವಿಷ್ಯತ್ತನ್ನು ನಿರ್ಧಾರ ಮಾಡುವ ಹೊಣೆಯನ್ನು ನಮ್ಮ ದೇಶದ ಜನತೆಯ ಪಾಲಿಗೆ ಬಿಟ್ಟಿರುವದು ತುಂಬಾ ಶ್ಲಾಘನೀಯ. ಅಂತಹ ನಿರ್ಧಾರ ಮಾಡುವ ಸಂಸಂಧಿಯು ಮುಂಬರುವ ಕೌನ್ಸಿಲು ಚುನಾವಣೆಯಲ್ಲೆಂಬುದು ಜನಸಾಮಾನ್ಯರಿಗೆ ತಿಳಿದ ವಿಷಯ.

ಕೊಡಗಿನಲ್ಲಿ ಎಲ್ಲಾ ವಿಧದಲ್ಲಿಯೂ ಯಾವ ಕೋಮಿನವರೇ ಇರಲಿ, ಹಿಂದುಳಿದ ಜನತೆಯೆಂದರೆ ಸೋಮವಾರಪೇಟೆ ನಾಡಿನವರು. ನಮ್ಮ ಸುಕೃತ ವಿಶೇಷದಿಂದ ಈಗ ತಾನೆ ಸೋಮವಾರಪೇಟೆಯಲ್ಲಿ ಒಂದು ಹೈಸ್ಕೂಲು ಸ್ಥಾಪನೆಯಾಗಿ ವಿದ್ಯೆಯಲ್ಲಿ ಕ್ರಮಶಃ ನಾವು ಮುಂದಡಿಯಿಡುತ್ತಿದ್ದೇವೆ. ಆದರೂ ಸಹ ಇತರ ಜನಾಂಗದವರಂತೆ ಸರ್ವಬಾಬಿನಲ್ಲಿ ಸರಿಸಮಾನತೆ ಸನ್ಮಾನ ಪಡೆಯಬೇಕಾದರೆ ಕಾಲ ವಿಳಂಬವಿದೆ. ಜನತೆಯು ವಿದ್ಯಾಭಿವೃದ್ಧಿ ಇನ್ನೂ ಅನೇಕ ರೀತಿಯ ಶ್ರೇಯಸ್ಸಾಧನೆ ನಮ್ಮ ಮುಂದಿದೆ. ಇವುಗಳಿಗೆ ತಕ್ಕ ಪರಿಹಾರೋಪಾಯವನ್ನು ಕಂಡು ಹಿಡಿಯುವುದು ನಮ್ಮ ಆದ್ಯ ಕರ್ತವ್ಯ ಪರಿಸ್ಥಿತಿ ಇಂತಿರುವ ಈ ಸಂದರ್ಭದಲ್ಲಿ ವಿದ್ಯಾವಿಹೀನರಾಗಿ ಹುಟ್ಟು ಕುರುಡರಂತಿರುವ ನನ್ನ ಎಲ್ಲಾ ಜನತೆಯ ಮಧ್ಯೆ ಒಕ್ಕಣ್ಣಿನವ ಹೊಬ್ಬ ರಾಜನೆಂಬಂತೆ (among the blind one eyed is the King) ಹಲ ಕೆಲವು ದುರಾಗ್ರಹಿಗಳು ಆತ್ಮದಲ್ಲಿ ಮೂತ್ರ ಕೊಡಗನ್ನು ಮೈಸೂರಿಗೋ ಇಲ್ಲವೇ ಕರ್ನಾಟಕಕ್ಕೋ ಸೇರಿಸುವುದನ್ನೇ ತಮ್ಮ ಮುಖ್ಯ ಧ್ಯೇಯವನ್ನಾಗಿಟ್ಟು ಕಂಠದ ವೇಲಕ್ಕೆ ಪ್ರತ್ಯೇಕವಾದಿಗಳ ಸೋಗಿನಲ್ಲಿ ಊರೂರು ತಿರುಗಿ ನಾವೂ ಕೂಡ ಪ್ರತ್ಯೇಕವಾದಿಗಳು, ನಿಮ್ಮೆಲ್ಲರ ಮತ್ತು ನಿಮ್ಮ ಪೀಳಿಗೆಯ ಏಳಿಗೆಗಾಗಿ ದುಡಿಯಲು ಟೊಂಕ ಕಟ್ಟಿದ್ದೇವೆ ಬಿವೇ ಮೊದಲಾಗಿ ಏನೂ ಅರಿಯದ ಜನತೆಗೆ ಬೋಧಿಸಿ ಅವರನ್ನು ವಂಚಿಸಲುದ್ಯುಕ್ತರಾಗಿರುವುದು ತುಂಬಾ ವಿಷಾದಕರ. ಕೊಡಗನ್ನು ಪ್ರತ್ಯೇಕವಿರಿಸುವುದರ ಇಲ್ಲಹೇ ಬೇರೆ ಯಾವುದಾದರೂ ಪ್ರಾಂತಕ್ಕೆ ವಶೀಕರಿಸುವುದರ ಹಿತಾಹಿತ ಸಾಧಕ ಬಾಧಕಗಳನ್ನು ನಿಮ್ಮೆಲ್ಲರ ಮುಂದಿಡಬೇಕೆಂಬ ಕಾಂಕ್ಷೆಯಿಂದ ಈ ಲೇಖನವನ್ನು ಬರೆಯಬೇಕಾದ ಸುಸಂಪರ್ಕವೊದಗಿತು.

ಸರ್ವರಿಗೂ ವಿಪಥ ವಿರುಹಂತೆ ನಾವು ಎಲ್ಲಾ ಖಾಬಿನಲ್ಲಿಯೂ ಹಿಂದುಳಿದು ಮೂಲೆಗುಂಪಾಗಿರುವ ಜನತೆ ಈಗೀಗ ನಾವು ವ್ಯವಸಾಯ, ವಿದ್ಯೆ, ಶುಚಿತ್ವ, ಆರೋಗ್ಯ ಪರಿಪಾಲನೆ, ವಾಗ್ಪಟುತ್ವ ಇವೇ ಮುಂತಾದವುಗಳಲ್ಲಿ ತುಸುಮುಟ್ಟಿಗೆ ಚೇತರಿಸಿಕೊಳ್ಳುತ್ತಿದ್ದೇವೆ. ಜನತೆಯಲ್ಲಿ ಶ್ರೀಮಂತರು, ವಿದ್ಯಾವಂತರು, ಲೌಕಿಕ ಪರಿಜ್ಞಾನವುಳ್ಳವರು ತೀರಾ ನೂರಕ್ಕೆ ಎರಡೂ ಕೂಡಾ ಇಲ್ಲ. ಬಹುಶಃ ಇದ್ದರೂ ಬಡ ಜನತೆಯನ್ನು ಗದರಿಸಿ ಬೆದರಿಸಿ ಅವರನ್ನು ಮೂಲೆಗೊತ್ತಿ ಕೈಗೊಂಬೆಗಳನ್ನಾಗಿ ಮಾಡಿಕೊಂಡಿರುತ್ತಾರೆ ಅಷ್ಟರಿ ಇದು ನವಖುಗ. ಇನ್ನಾದರೂ ನಾವು ಎಚ್ಚೆತ್ತಗೊಳ್ಳಬೇಕು. ಜಾಗೃತರಾಗಬೇಕು. ನಮ್ಮ ಹಿತಸಾಧನೆಯಾಗಬೇಕು. ಹೀಗಿರುತ್ತ ಶ್ರೇಯೋಭಿಲಾಷೆಗೆ ಯಾವ ಮಾರ್ಗವನ್ನನುಸರಿಸಬೇಕೆಂಬುದನ್ನು ನಾವು ಗಾಢವಾಗಿ ಯೋಚಿಸಬೇಕಿಷೆ.

ಕೊಡಗು ಇಡೀ ಭಾರತದ ಒಂದು ಚಿಕ್ಕ ಪ್ರಾಂತ. ಇಂದು ಭಾರತವು ಆಹಾರ ಅಭಾವದಿಂದ ತತ್ತರಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ದೂರಪ್ರದೇಶಗಳಿಂದ ಆಹಾರ ಪದಾರ್ಥಗಳನ್ನು ರಾಶಿ ರಾಶಿಯಾಗಿ ಅವುದು ಮಾಡಿದರೂ ಕೂಡ ಜನರ ಹಸಿವಿನ ಹಾಹಾಕಾರವನ್ನಡಗಿಸಲು ಸಾಧ್ಯವಾಗಿಲ್ಲ. ಆ ಕಾರಣದಿಂದ ದೇಶದ ಎಲ್ಲೆಡೆಯಲ್ಲಿಯೂ ರೇಷನ್ ಕಟ್ಟಳೆಯನ್ನು ಅಮಲಿಗೆ ತಂದಿತು. ಕೊಡಗಿನ ಹೊರ ಪ್ರಾಂತಗಳಲ್ಲಿನ ಜನತೆಯು ಆಹಾರಕ್ಕಾಗಿ ಪಡುತ್ತಿರುವ ಕಷ್ಟ ಚಿಂತಾಜನಕವಾಗಿದೆ. ಕೊಡಗು ರೇಷನ್ ಕಟ್ಟಳೆಗೊಳಪಟ್ಟಿದ್ದರೂ ಕೂಡ ಹೊರ ಪ್ರಾಂತದ ಹಾಗೆ ಆಹಾರಕ್ಕಾಗಿ ಧರಣಿಯ ಅವಶ್ಯಕತೆ ಈ ತನಕ ಕಂಡು ಬಂದಿಲ್ಲ. ಆ ಬಾಬಿನಲ್ಲಿ ಕೊಡಗು ಬೇರೆ ಪ್ರಾಂತಗಳಿಗಿಂತ ನೆಮ್ಮದಿಯಲ್ಲಿದೆಯೆಂದು ಹೇಳಬಹುದು.

ಆದಿಯಿಂದಲೂ ಕೊಡಗು ಪ್ರತ್ಯೇಕ ವಿದ್ಯಾ ಕನ್ನ ಅಡಳಿತೆಯನ್ನು ಸುಸೂತ್ರವಾಗಿ ನಿರ್ವಹಿಸಿಕೊಂಡು ಬಂದಿರುವ ಒಂದು ಚಿಕ್ಕ ಪ್ರಾಂತ್ಯ. ಈ ಕಾರ್ಯ ನಿರ್ವಹಣೆಯಲ್ಲಿ ಲೋಪದೋಷಗಳಿದ್ದಿರಬಹುದು ಪಕ್ಷಪಾತ ನಡೆದಿರಬಹುದು. ಹೇಗಿದ್ದರೂ ಹೊರ ಪ್ರಾಂತಗಳ ಅಡಳಿತೆಯ ಶ್ರೇಷ್ಠತೆಗಿಂತ ನಮ್ಮ ಸರಕಾರವು ಉನ್ನತ ಮಟ್ಟದಲ್ಲಿದೆಯೆಂಬುದು ನಿರ್ವಿವಾದ. ಮುಂಬರುವ ಚುನಾವಣೆಯ ನಂತರ ನಮ್ಮ ಸರಕಾರದ ಅಡಳಿತೆಯ ಹಿಡಿತವೆಲ್ಲಾ ಚುನಾಯಿತ ಪೆಂಬರರ ಕೈಗೆ ಸಿಗುತ್ತೆ. ಆಗ ಕೊಡಗಿನ ಸರ್ಕಾರವು ಇನ್ನೂ ಸುಭದ್ರವಾಗುವುದರಲ್ಲಿ ಲವಲೇಶವಾದರೂ ಸಂಶಯವಿಲ್ಲ. ಈ ತನಕ ಸರಕಾರದ ಅಡಳಿತದ ಜವಾಬ್ದಾರಿಯೆಲ್ಲಾ ಕೊಡಗಿನ ಮುಖ್ಯಾಧಿಕಾರಿ ಜೇಫ್ ಕವಿಷನರ ಕೈಯ್ಯಲ್ಲಿತ್ತು. ಅದ ಪ್ರಯುಕ್ತ ಜನತೆಯ ಅಭ್ಯುದಯಕ್ಕೆ ಕೆಲವಾರು ಸಂದರ್ಭಗಳಲ್ಲಿ ಅಡಚಣೆಯಿತ್ತು. ಆದರೆ ಇನ್ನು ಮುಂದೆ ಅವುಗಳೆಲ್ಲಾ ದೂರವಾಗಿ ಜನತೆಯು ಶ್ರೇಯಸ್ಸಾಧನೆಯು ಜನತೆಯಿಂದಲೇ ನಡೆಯುವ ಅನುವು ನಮಗೆ ದೊರೆಯುತ್ತದೆ. ಹೀಗಿರುವಾಗ ನಾವು ಇರುಳು ಕಂಡ ಹೊಂಡಕ್ಕೆ ಹಗಲು ಹಠತಾತ್ತಾಗಿ ಹಾರುವ ಹಂಬಲ ಮಾಡಿ ಅರ್ಥಾತ್ ವೈಸೂರಿಗೊ ಇಲ್ಲವೇ ಬೇರೆ ಯಾವುದಾದರೂ ಪ್ರಾಂತಕ್ಕೊ ಸೇರುವ ಮನಸ್ಸು ಮಾಡಿದರೆ, ಪ್ರತ್ಯೇಕವೇ ಇದ್ದು ಮುಂದೆ ನಮಗೊದಗಬಹುದಾದ ಸೌಲಭ್ಯ ಸಲಕರಣೆಗಳನ್ನು ಕಳೆದುಕೊಂಡು ತಾಯಿಯಿಲ್ಲದ ತಬ್ಬಲಿಗಳಾಗದಂತೆ ಜಾಗರೂಕರಾಗಬೇಕೆಂದು ಒತ್ತಿ ಹೇಳಬೇಕಿದೆ. ಅಲ್ಲದೆ ನಮ್ಮ ಹಾಗೂ ನಮ್ಮ ಮುಂದಣ ಪೀಳಿಗೆಗೆ ಯಃ ಹಿತಸಾಧನೆಗೆ ಒಂದು ದೊಡ್ಡ ಅಪಘಾತ ಮಾಡಿದಂತಾಗುತ್ತದೆಂಬುದನ್ನು ನೆನಪಿನಲ್ಲಿಡಬೇಕು. ಹೊರ ಪ್ರಾಂತದ ಹಳ್ಳಿಗಳ ಸ್ಥಿತಿಗತಿ, ಅವರ ಸಂಕಷ್ಟ, ಅಶಂತುಷ್ಟಿ ಪರಿಶ್ರಮ ಇವನ್ನೆಲ್ಲಾ ನೋಡಿದರೆ ಎಂತಹ ಮೂರ್ಖನಿಗಾದರೂ ಕೂಡ ಆ ಪ್ರಾಂತದ ಗೊಡವೆಯೇ ನಮಗೆ ಬೇಡ, ನಮ್ಮ ಕೊಡಗು ಪ್ರತ್ಯೇಕವಿರುವುದೇ ಒಳಿತು ಎಂದೆನಿಸದಿರಲಾರದು.

ಕಡೆಯದಾಗಿ ಒಂದು ಮಾತು. ಸೋಮವಾರಪೇಟೆ ನಾಡಿನ ಜನತೆಯಾವ ಕೋಮಿನವರೇ ಇರಲಿ, ತೀರಾ ಬಡವರು, ಅಂಧಶ್ರದ್ಧರು, ಅವಿದ್ಯಾವಂತರು. ಹೀಗಿರುತ್ತ ನಾವು ನಮ್ಮ ಕೊಡಗನ್ನು ಅವರಿವರ ಮಾತಿಗೆ ಮರುಳಾಗಿ ಬೇರೆ ಯಾವುದಾದರೂ ಪ್ರಾಂತಕ್ಕೆ ಸೇರಿಸುವ ಮನಸ್ಸು ಮಾಡಿದರೆ ಇನ್ನು ಯುಗ ಯುಗಾಂತರಕ್ಕೂ ನಾವು ಮುಂದುವರಿಯುವ ಸಂದರ್ಭ ಬರುವುದಿಲ್ಲವೆಂಬುದನ್ನು ಖಂಡಿತಾ ಮರೆಯಬಾರದು. ಆ ಕಾರಣ ನೀವೆಲ್ಲ ಯಾವ 'ಕರಣ'ಕ್ಕೆ ಒಪ್ಪುವಿರಿ? ಪ್ರತ್ಯೇಕೀಕರಣಕ್ಕೊ ಅಥವಾ ವಿಲೀನೀಕರಣಕ್ಕೊ? ನೀವೇ ಯೋಚಿಸಿ ನೋಡಿರಿ.

ಇಂತಹ ಸಂದಿಗ್ಧ ಸನ್ನಿವೇಶದಲ್ಲಿ ನಾವು ದೀರ್ಘಾಲೋಚಿಸಿ ನಮ್ಮ ದೇಶವು ಪ್ರತ್ಯೇಕವಿರಲೇಬೇಕೆಂದು ಪಾಪೆಲ್ಲೂ ಒಮ್ಮನಸ್ಸಿನಿಂದ ನಾವು ಅರಿಸುವ ಪ್ರತ್ಯೇಕವಾದಿ ಹುರಿಯಾಳುಗಳನ್ನು ನಮ್ಮ ಅಮೂಲ್ಯವಾದ ಓಟುಗಳಿಂದ ಪ್ರೋತ್ಸಾಹಿಸಿ ಅವರ ಮುಖೇನ ನಮ್ಮೆಲ್ಲರ ಶ್ರೇಯಸ್ಸಾಧನೆಗೆ ಮುಡಿಯಲು ಅವರಿಗವಕಾಶ ಕೊಡಬೇಕಾಗಿ ವಿನಂತಿ. 'ಮತದಾರ'

ಕೊಡಗಿನ ರಾಜಕೀಯ ರಂಗಭೂಮಿ.

ಕೊಡಗು ಪ್ರತ್ಯೇಕವಿದ್ದ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುವುದು ಲೇಸೋ ಯಾ ಬೇರೊಂದು ಪ್ರಾಂತದೊಡನೆ ವಿಲೀನೀಕರಣವಾಗಿ ತನ್ನ ಸ್ಥಾನಮಾನಗಳನ್ನು ಕಳಕೊಂಡು ಒಂದು ಜಿಲ್ಲೆ ಯಾ ತಾಲೋಕಾಗಿ ವ್ಯಕ್ತಿತ್ವವನ್ನು ತ್ಯಜಿಸಿ ತನ್ನ ಪೂರ್ಣ ಆದಾಯವನ್ನು ಖರ್ಚು ಮಾಡುವ ಹಕ್ಕುದಾರಿಕೆಯನ್ನು ಕಳಕೊಂಡು ಬಾಳುವುದು ಲೇಸೋ ಎಂಬುದನ್ನು ಪಕ್ಷಪಾತವಿಲ್ಲದೆ ವಿವೇಚಿಸಬೇಕಾಗಿದೆ. ಇಂಥಾ ವಿವೇಚನೆಯಲ್ಲಿ ಹೆಚ್ಚಾಗಿ ಈ ದೇಶದಲ್ಲಿ ಅಸ್ತಿ ಪಾಸ್ತಿಗಳು ಮತ್ತು ಹಕ್ಕು ಬಾಧ್ಯತೆಗಳನ್ನು ಪಡಕೊಂಡಿರುವರು ಕೋಮುವಾರು ದೃಷ್ಟಿಯನ್ನು ಬದಿಗಿಟ್ಟು ವ್ಯಕ್ತಿಗಳ ಮೇಲಿರುವ ಪ್ರೀತಿ ಯೂ ಅಸೂಯೆಗಳನ್ನು ಪೂರ್ತಿ ತ್ಯಜಿಸಿ ದೇಶದ ಏಳಿಗೆಯನ್ನು ಜಯಿಸಿ, ತಮ್ಮ ನಿಶ್ಚಿತ ಅಭಿಪ್ರಾಯಕ್ಕೆ ಬರುವುದು ಪ್ರತಿಯೊಬ್ಬ ದೇಶಬಾಂಧವನ ಕರ್ತವ್ಯವೆಂದರೆ ಬರೇ ಪ್ರಚಾರವೆಂದಾಗಲಾರದು. ಆದರೆ ಇಂದಿನ ವಿಶ್ವದಲ್ಲಿ ನೀತಿ, ಧರ್ಮ, ನ್ಯಾಯುಗಳನ್ನು ಮೂಲೆಗೊತ್ತಿ ಹೃತ್ಕಿಗಳ ಮೇಲಿರುವ ಸೆಡನ್ನು ತೀರಿಸುವ ಭ್ರಾಂತಿಯಿಂದ ದೇಶವನ್ನು ಧಾರೆ ಎಡೆದ ಉದಾಹರಣೆಗಳು ಬೇಕಾದಷ್ಟು ಇವೆ. ಆದರಲ್ಲಿ ನಮ್ಮ ದೇಶದ ಪೂರ್ವ ಚರಿತ್ರೆಯನ್ನು ತೆಗೆದುಕೊಂಡರೆ ಇಂಥಾದ್ದು ಅನೇಕ ಇವೆ. ಇಂಥಾ ಒಂದು ಪ್ರಸಂಗದಿಂದ ನಮ್ಮ ಪ್ರಾಂತ್ಯವು ಹೊರ ಬರಬೇಕಾದ ಒಂದು ನಿರ್ಧಾರವನ್ನು ನಮ್ಮ ಮುಂದಿನ ಚುನಾವಣೆಯಲ್ಲಿ ಪ್ರದರ್ಶಿಸಬೇಕಾಗಿದೆ. ಆಗ ಮುಖ್ಯವಾಗಿ ಮತದಾರರು ಮತ್ತು ಸದಸ್ಯರಾಗಿ ನಿಲ್ಲುವವರ ವರ್ತನೆ ಹೇಗಿರಬೇಕೆಂಬುದನ್ನು ಸ್ವಲ್ಪ ವಿವರಿಸಬೇಕಾಗಿದೆ

ಸದಸ್ಯರಾಗಿ ನಿಲ್ಲುವವರಲ್ಲಿ ಕೆಲವರು ತಮ್ಮ ನಿಶ್ಚಿತ ಅಭಿಪ್ರಾಯಗಳನ್ನು ದೇಶೀಯರ ಮುಂದಿಟ್ಟು ಪ್ರಚಾರ ಮಾಡುವರು ಆದರೆ ಇನ್ನು ಕೆಲವರು ಭಿನ್ನಾಭಿಪ್ರಾಯಗಳನ್ನು ಹೇಳುತ್ತ ಮತದಾರರನ್ನು ವಂಚಿಸುವುದು ಒಂದು ರೀತಿ. ಇಂದಿನ ಚುನಾವಣೆಯಲ್ಲಿ ಪ್ರೌಢ ಮತದಾನವಿರುವದರಿಂದ ಹೆಚ್ಚಿನ ಮತ್ತಿಗೆಮತದಾರರು ನಿರಕ್ಷರ ಕುಕ್ಷಿಗಳಾಗಿರುವುದರಿಂದ ಅವರನ್ನು ಲಂಚಗುಳಿತನದಿಂದಲೂ ತಪ್ಪು ಪ್ರಚಾರಗಳಿಂದಲೂ ಸದಸ್ಯರಾಗಲಿರುವವರೂ ಮತ್ತು ಅವರ ದಳ್ಳಾಳಿಗಳೂ ತಪ್ಪು ದಾರಿಗೆ ಎಳೆಯುವುದು ಖಂಡಿತ. ಆದರೆ ಮತದಾರರು ತಮ್ಮ ಜೀವಕ್ಕಿಂತ ಮತವು ಮೇಲೆಂದು ತಿಳಿಯುವಂತೆ ಕಾಂಚಾಣಗಳಿಗೆ ಮೋಹಿತರಾಗದಂತೆ ಎಚ್ಚರಿಸುವುದು ಪ್ರತಿಯೊಬ್ಬ ದೇಶಬಾಂಧವನ ಕರ್ತವ್ಯವಿರಬೇಕು. ಈ ಸಂದರ್ಭದಲ್ಲಿ ಪತ್ರಿಕೆಗಳಲ್ಲೂ ಮತ್ತು ಅಲ್ಲಲ್ಲಿ ಭಾಷಣಗಳ ಮೂಲಕವೂ ಪ್ರಚಾರ ಆಗಿಂದಾಗ್ಗೆ ಆಗುತ್ತಾ ಇರಬೇಕು. ಇಂದಿನ ಚುನಾವಣೆಗಳಲ್ಲಿ ಹೆಚ್ಚಿನ ಮಹತ್ವ ಅಪಪ್ರಚಾರಕ್ಕೆ ಇರುವುದನ್ನು ಮತದಾರರು ವಿವೇಚಿಸಿ ಅರಿತವರಿಂದ ಕೇಳಿ ತಿಳಿದುಕೊಳ್ಳಬೇಕಾಗುವುದು. ಅಲ್ಲದೆ ತಮ್ಮ ಮತವನ್ನು ಯಾವದಾದರೂ ವ್ಯಕ್ತಿಯು ಬಂದು ಕೇಳಿದಾಗ್ಗೆ ಅವನ ಖಚಿತ ಅಭಿಪ್ರಾಯವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಅಪಪ್ರಚಾರಗಳು ಇದ್ದರೂ ಅದನ್ನು ಇತರರಿಂದ ತಿಳಿದು ವಿವೇಚಿಸಿ ವರ್ತಿಸಬೇಕಾದುದು ಇನ್ನೊಂದು ವಿಷಯ. ಆದುದರಿಂದ ನಮ್ಮ ಕೊಡಗಿನ ಮುಂದಿನ ಚುನಾವಣೆಯು ಈ ತಳಹದಿಯ ಮೇಲಿರುವುದರಿಂದ ಭಾವಾವೇಷದ ಪ್ರೇಮದಿಂದಾಗಲೀ, ಸ್ನೇಹದ ಫಲದಿಂದಾಗಲೀ, ಸುರಾ ಕಾಂಚಾಣದ ಮೋಹದಿಂದಾಗಲೀ ತಮಗೆ ಕೊಡಬೇಕಾದ ವ್ಯಕ್ತಿಗಳಿಗೆ ಕೊಡದೆ, ಬೇರೆಯೊಬ್ಬರಿಗೆ ಕೊಟ್ಟರೆ ನಮ್ಮ ಆತ್ಮವನ್ನು ವಂಚಿಸಿದಲ್ಲದೆ ತಮ್ಮ ಮತವನ್ನು ಸದುಪಯೋಗ ಮಾಡಿದಂತಾಗುವುದಿಲ್ಲವೆಂಬುದನ್ನು ಮರೆಯಬಾರದು.

ಈಗಿನ ವಿಶ್ವದ ಜನರ ವರ್ತನೆ ಹೇಗಿದೆಯೆಂದರೆ ವಿಶ್ವ ವಿಜ್ಞಾನಿ ಪ್ರೊಫೆಸರ್ ಐನ್‌ಸ್ಟೈನ್ ಹೇಳಿದಂತೆ At present we glorify success instead of sacrifice" ಎಂದು ಹೇಳಿರುವರು. ಅಂದರೆ ಆಧುನಿಕ ಸನ್ನಿವೇಶದಲ್ಲಿ ತ್ಯಾಗಕ್ಕಿಂತ ಜಯವನ್ನು ಕೊಂಡಾಡುವುದೇ ಹೆಚ್ಚಿಯಾಗಿದೆ. ಅದುಪರಿಂದ ಪ್ರಾಮಾಣಿಕತೆ, ತ್ಯಾಗ, ನೀತಿ, ಧರ್ಮಗಳನ್ನು ಪಾಲಿಸುವ ಸದಸ್ಯರಿಗೆ ಮತವೀಯುವುದೇ ಕಡಿಮೆ. ಕೊನೆಯುಸಿರಾಗಿ ಹೇಳುವಷ್ಟಾದರೆ ಕೋಳಿಹೂನ್ಯತೆಯನ್ನು ಪಡೆದ ಶೇಕ್ಸ್‌ಪಿಯರ್ ಕವಿಯು ತನ್ನ ಒಂದು ನಾಟಕದಲ್ಲಿ ಈ ವಿಶ್ವವು ಒಂದು ನಾಟಕ ಶಾಲೆ. ಇಲ್ಲಿ ಪ್ರತಿಯೊಬ್ಬ ವ್ಯಕ್ತಿ ಒಂದಲ್ಲ ಒಂದು ರೀತಿಯ ವೇಷ ಧರಿಸಿ ತನ್ನ ಪಾತ್ರವನ್ನು ದೇಶದ ಹಿತಕ್ಕೋ ಮಾನವನ ಹಿತಕ್ಕೋ ಅಹಿತಕ್ಕೋ ಅಭಿನಯಿಸಿ ಹೋಗುವುದಿದೆ. ಅದುಪರಿಂದ ಈ ಇಳೆಯೆಂಬ ನಾಟ್ಯರಂಗದೊಳಗೆ ನಾನಾ ಭಿನ್ನವೇಷಗಳನ್ನು ಧರಿಸಿ ಹೋಗುತ್ತಿರುವುದನ್ನು ಅರಿತು ತನ್ನ ಆತ್ಮಕ್ಕೆ ಸಮಾಧಾನ ಕೊಡುವ ಕೆಲಸವನ್ನು ಮಾಡುವುದು ಚುನಾವಣೆಯಲ್ಲಿ ನೂಡಬೇಕಾದ್ದು ಪ್ರತಿಯೊಬ್ಬ ದೇಶೀಯರ ಕರ್ತವ್ಯ.

'ಓಟರು'.

ನೆಹರೂರವರ ಭಾಷಣ.

(೧ನೇ ಪುಟದಿಂದ ಸಾಗಿದ್ದು.)

ದರೆ ನಮಗೆ ಅಸ್ಥೆಯಿಂಟು, ಅಷೂ ಅಲ್ಲಿ ಹು ಅಲ್ಪ ಸಂಖ್ಯಾಕರ ಹಿತರಕ್ಷಣೆಯ ಸಂಬಂಧದಲ್ಲಿ. ನಾವಂತೂ ವಿಭಜನೆಗೆ ಒಪ್ಪಿಕೊಂಡೆವು. ಆದರೆ ವಿಭಜನೆಯ ಪರಾವರ್ತನೆಯ ಬಗ್ಗೆ ಮಾತನಾಡುವುದೊಂದಕೆ ಅದು ನಿಜವಾಗಿಯೂ ಹೇಯವಾದುದು. ಇದು ಭಾರತದಲ್ಲಿಯು ಯಾವನಿಗೂ ಭೂಷಣವಲ್ಲ.

'ಕಳೆದ ನಾಲ್ಕು ವರ್ಷಗಳಿಂದಲೂ ಬಿಕ್ಕಟ್ಟಿನ ರೂಪದಲ್ಲಿರುವ ಪಾಕಿಸ್ತಾನದೊಂದಿಗಿನ ಭಾರತದ ಸಂಬಂಧಗಳಿಗೆ, ಭಾರತವು ಈಗ ವ್ಯಣಶಮಪ ಲೇಪನವನ್ನು ತೊಡೆಯಬೇಕಾಗಿದೆ. ಕೆಲವು ಪ್ರಸಂಗಗಳಲ್ಲಂತೂ ನಾವು ಯುದ್ಧದ ಪರಿಸ್ಥಿತಿಗೆ ಬಂದಿದ್ದೆವೆಂಬುದಕ್ಕೂ ಮರೆಯೋಣ. ಯುದ್ಧದಂಥ ಮೂರ್ಖತನದ ಮತ್ತು ಅಹಿತಕಾರಿ ಕಾರ್ಯ ಮತ್ತೊಂದಿಲ್ಲವೆಂಬುದನ್ನು ಭಾರತೀಯನಾಗಲೀ, ಪಾಕಿಸ್ತಾನಿಯನಾಗಲಿ ಅರಿಯದಿರನು. ಆದರೆ ಉದ್ವೇಷ ಮತ್ತು ಕೋಪವು ಜನತೆಯ ಮನವನ್ನು ಕಂಗೆಡಿಸುವುದು ಮತ್ತು ಅವಳಲ್ಲಿ ದ್ವೇಷವನ್ನು ಪ್ರಜ್ವೋದಿಸುವುದು.

ಕಳೆದ ವರ್ಷವೇ ನಾವು ಪಾಕಿಸ್ತಾನದಲ್ಲಿ ಎದ್ದ ಯುದ್ಧದ ಉನ್ಮಾದವನ್ನು ನೋಡಿದ್ದೇವೆ. ಅದರಿಂದಾಗಿಯೇ ನಾವು ನಾಗರಿಕ ಮುಂಜಾಗ್ರತೆಗಳನ್ನು ತೆಗೆದುಕೊಳ್ಳಬೇಕಾದ ಪ್ರಸಂಗ ಬಿದ್ದಿತು. ಪ್ರಸಂಗ ಬಿದ್ದಾಗ, ಮುಂಜಾಗ್ರತೆಗಳನ್ನು ತೆಗೆದುಕೊಳ್ಳುವಾಗ, ಪಾಕಿಸ್ತಾನದೊಂದಿಗೆ ನಮ್ಮ ಸಶಸ್ತ್ರೆಗಳ ಶಾಂತಿಯುತ ಪರಿವರ್ತನೆಯೊಂದೇ ಆಗಿರದೇ, ಕೆಲ ದಿನಗಳ ಹಿಂದೆಯೇ ಭಾರತದ ಭಾಗವಾಗಿದ್ದ ಅದರೊಂದಿಗೆ ನಿಕಟ ಮತ್ತು ಸ್ನೇಹವಂಯೀ ಸಂಬಂಧ ಬೆಳೆಸುತ್ತ ನೋಡಬೇಕಾಗಿದೆ.

ಒಂದಿಲ್ಲ ಒಂದು ದಿನ ಈ ನಿಕಟ ಬಾಂಧವ್ಯ ಎರಡೂ ರಾಷ್ಟ್ರಗಳಲ್ಲಿ ಬರುತ್ತದು ಅತ್ಯವಾರ್ಯವಾಗುದು. ಹಾಗಿದ್ದಲ್ಲಿ, ನಮ್ಮ ರಾಷ್ಟ್ರಕ್ಕೆ ಅಪಾಯಕಾರಿಯೂದ ಮತ್ತು ಗಂಡಾಂತರಕ್ಕೆ ಸಿಲುಕಿಸುವು ದೆಂದು ತಿಳಿಯಲಾಗುವ ಯಾವ ಕಾರ್ಯವನ್ನೂ ಕೈಕೊಳ್ಳದೇ ನಾವು ಆ ಗುರಿಯತ್ತ ಕಾರ್ಯೋನ್ಮುಖರಾಗೋಣ.

ಕಾಶ್ಮೀರ ಸಮಸ್ಯೆ.

'ಕಾಶ್ಮೀರದ ಭವಿತವ್ಯ ಕಾಶ್ಮೀರಿಗಳಿಂದಲೇ ನಿರ್ಧರಿಸಲ್ಪಡಬೇಕೆಂಬುದನ್ನು ಬೇರೆ ಹೇಳಬೇಕಿಲ್ಲ. ಕಾಶ್ಮೀರದಲ್ಲಿ ಸಾರ್ವಮತಗಣತಿ ಪಡೆಯಬೇಕೆಂಬುದಕ್ಕೆ ನಾವು ಬದ್ಧವಾಗಿದ್ದು, ಅದಕ್ಕಾಗಿ ನಾವು ತೃಪ್ತರಾಗಿದ್ದೇವಲ್ಲದೆ ಭಾವಿ ಪರಿಣಾಮದ ಬಗ್ಗೆಯೂ ತೃಪ್ತರಾಗಿದ್ದೇವೆ. ಅಂಥ ಮತಗಣನೆಯು ಯೋಗ್ಯವಾಗಿ ಮತ್ತು ಪೂರ್ಣವಾಗಿ ಜರುಗಬೇಕಲ್ಲದೆ, ಪಾಳಿಗಾರರ ಫಲುಪೆಗೆ ಅವಕಾಶ ಕೊಡಕಕ್ಕ ಕಾರಿನ ಹೇಲೆ ಅದೆಂದೂ ಜರುಗ ಕೂಡದು. ಕಾಶ್ಮೀರಕ್ಕೆ ಹೋಗಿ ಅಲ್ಲಿಯ ಜನತೆ ತಮ್ಮ ಜಾತೀಯತೆಯನ್ನು ಮರೆತು, ತನ್ನ ರಾಷ್ಟ್ರ ರಕ್ಷಣೆಗಾಗಿ ಮತ್ತು ಸಾಮಾಜಿಕ ಬೆಳವಣಿಗೆಗಾಗಿ ಹೇಗೆ ಒಗ್ಗೂಡಿ ಸಹಕಾರದಿಂದ ವರ್ತಿಸುತ್ತಿದ್ದಾರೆಂಬುದನ್ನು ಮತ್ತು ಅವರು ಏನು ಬಯಸುತ್ತಿದ್ದಾರೆಂಬುದನ್ನು ಕೋಡಿ ತಿಳಿದುಕೊಳ್ಳಬಹುದಾಗಿದೆ. ಭಾರತದ ಇತರ ಭಾಗಗಳಿಗಿಂತಲೂ ಕಾಶ್ಮೀರವು, ಭೂ ಸುಧಾರಣೆಯ ವಿಷಯದಲ್ಲಿ ಹೆಚ್ಚಾಗಿ ಶೀಘ್ರಗತಿಯಿಂದ ಸುಧಾರಣೆಗೊಳಗಾಗಿದೆಯೆಂಬುದನ್ನು ಕಂಡುಕೊಳ್ಳಬಹುದಾಗಿದೆ.

ಜಾತೀಯತೆ.

'ಜಾತೀಯತೆಯು ಸಂಕುಚಿತ ಮತ್ತು ವಿಘಾತಕಾರಿ ವಿಚಾರಸರಣಿಯೂಗಿದೆ. ಆಧುನಿಕ ಜಗತ್ತಿನಲ್ಲಿ ಇದಕ್ಕೆ ಎಳ್ಳಷ್ಟೂ ಸ್ಥಾನವಿಲ್ಲ. ನಮ್ಮ ನಮ್ಮಲ್ಲಿಯ ಮಧ್ಯದಲ್ಲಿ ಜಾತೀಯ ಕಂದರಗಳನ್ನು ನಿರ್ಮಿಸಿಕೊಂಡಲ್ಲಿ ಭಾರತದ ಪ್ರಗತಿಯು ಸಾಧ್ಯವೇ ಇಲ್ಲ ಜಾತೀಯತೆಯ ಪ್ರಶ್ನೆ ಕೇವಲ ಹಿಂದೂ—ಮುಸ್ಲಿಮರಿಗೆ ಪೂರ್ತ ಮಾರ್ದಿತವಾಗಿರದೆ, ಇತರ ಧರ್ಮೀಯರು, ಪಂಥದ ಮತ್ತು ಜಾತೀಯ ಗುಂಪುಗಳಿಗೂ ಸಂಬಂಧಿಸಿದುದಾಗಿದೆ. ಒನ್ಮೆ ಈ ವಿಘಾತುಕ ಒಲವು ಹಬ್ಬಿತೆಂದರೆ, ಅದು ಎಲ್ಲಿಗೆ ಮುಕ್ತಾಯಗೊಳ್ಳುವುದೋ ಮತ್ತು ಏಳಿಗೆಯ ಒಗ್ಗೆ ಇದ್ದ ಕನಸು ಕೂಡ ಪೂರ್ಣವಾಗುವುದೋ ಎಂದು ಹೇಳಲಿಕ್ಕೆ ಬರಲಾಗದು. 'ನಾವು ಇತರ ರಾಷ್ಟ್ರಗಳಲ್ಲಿ ಕಾಣುತ್ತಿರುವ ವಿವಿಧರೀತಿಯ 'ಫ್ಯಾಸಿಜಂ' ದಮೊದರಿಯೇ ನಮ್ಮ 'ಜಾತೀಯತೆ'ಯೂಗಿದೆ. 'ಫ್ಯಾಸಿಜಂ'ಕ್ಕೆ ಭಾರತೀಯರು 'ಜಾತೀಯತೆ' ಎಂದು ಹೇಳಬಹುದು.

'ಆದ್ದರಿಂದ ಜಾತೀಯತೆಯನ್ನೂ ಹತ್ತಿಕ್ಕುವುದು ಮಹತ್ವದ ವಿಷಯವಾಗಿದೆ. ಭಾರತದಲ್ಲಿ ವ್ಯಕ್ತ ಮತ್ತು ಅವ್ಯಕ್ತ ಜಾತೀಯತೆಯ ವಿಚಾರಣೆ ಹುಟ್ಟನ್ನೇ ಅಡಗಿಸಬೇಕಾಗಿದೆ. ಅದರಿಂದ ಅತೀತರಾದಾಗ್ಗೆಯೇ ನಾವು ನಿಜವಾದ ಸ್ವಾತಂತ್ರ್ಯದ ಮಂರ್ಮವನ್ನು ಅರಿತೇವು ಮತ್ತು ಏಳಿಗೆ ಹೊಂದೇವು!

ಪ್ರಾಂತೀಯತೆ.

'ಭಾರತವು ವಿವಿಧ ಸಂಸ್ಕೃತಿಯುಳ್ಳ ವಿಶಾಲ ರಾಷ್ಟ್ರ. ಐಕ್ಯತೆಯು ಅಗತ್ಯವಿದ್ದಾಗ್ಗೆ ಒಕ್ಕಾಯದ ಏಕರೂಪತೆ ಅಥವಾ ಸಾಮ್ಯ ಅಗತ್ಯವಿಲ್ಲವಲ್ಲದೆ ಅನಪೇಕ್ಷಿತ ವಾಹುದೆಂದೂ ನಾನು ಭಾವಿಸುತ್ತೇನೆ. 'ಇಮ್ಮಲ್ಲಿ ಕೆಲವರು ರೂಢಿಗೊಂಡ ಕೆಲವೊಂದು ವಿಶಿಷ್ಟ ಪದ್ಧತಿಗಳಿಗೆ ಅಥವಾ ವಿಶಿಷ್ಟವಾದ ವಿಶೇಷ ದೃಷ್ಟಿಗಳಿಗೇ ಇದನ್ನು ನಾವು ಅನ್ವಯಿಸಹೋಹರೆ, ಭಾರತದ ಸಮಸ್ಯೆ ತಿಳುವಳಿಕೆಗೇ ಮಹಾಡಾಖಿಯನ್ನುಂಟುಮಾಡುವುದು.

ಸಂಸ್ಕೃತಿ.

'ಭಾರತಕ್ಕೆ ತನ್ನದೇ ಆದ ಮೂಲಭೂತ ಸಂಸ್ಕೃತಿಯು ನೋಟವ್ವಂಟು. ಪುರಾತನ ಕಾಲದಿಂದ ಏತಿಯೂನ ವಿವಿಧ ಭಾಗಗಳಿಂದ ಹರಿದು ಬಂದ ಮತ್ತು ಆನೇಕ ಹಶ್ಚಿಮೂತ್ಯ ರಾಷ್ಟ್ರಗಳಿಂದ ಹರಿದು ಬಂದ ಸಂಸ್ಕೃತಿಯ ರುಧಿರಗಳಿಂದ ಪವಿತ್ರವಾದ ಸಂಸ್ಕೃತಿ ಕಳೆಗೊಂಡಿದೆ. ಹೀಗೆ ಸಂಸ್ಕೃತಿಯಿಂದ ಭಾರತದೊಂದಿಗೆ ಹೆಣೆದುಬಿಟ್ಟಿರುವ ಆ ರಾಷ್ಟ್ರಗಳ ಸಂಬಂಧವನ್ನು ನಾವು ಕಾಯ್ದುಕೊಂಡು ಹೋಗಬೇಕಾಗಿದೆ'

ಹೀಗೆ ಕೋಮು ಸಮಸ್ಯೆಯ ಬಗ್ಗೆ ಮಾತನಾಡುತ್ತ 'ಈ ಸಮಸ್ಯೆಯು ಅಶ್ಯಯವು ಜಡತೆಯುಳ್ಳ ವಿಶೇಷವಾಗಿ ಮಹಿಳೆಯರನ್ನು ಅಂಥ ಸಂಪ್ರದಾಯ ಮತ್ತು ಅವರನ್ನು ಹಿಡಿದು ಕಟ್ಟಿದ ಬಂಧನಗಳಿಂದ ಬಿಡಿಸಲು ಯತ್ನಿಸುವ ವಿಶೇಷ ಶಕ್ತಿಯಾಗಿದೆ. ನಾವು ಎಲ್ಲ ದಿಕ್ಕುಗಳಿಂದಲೂ ಏಳಿಗೆ ಹೊಂದಬೇಕಾಗಿದೆ' ಎಂದು ಹೇಳಿದರು.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1931ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,99,400.
ಕ್ಷೇಮನಿಧಿ	ರೂ.	59,000.
ಇತರ ನಿಧಿಗಳು	ರೂ.	36,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದ

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಜೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ಸಮ್ಮಲ್ಲಿ ಈ ಕೆಳಗೆ ತೋರಿಸಿರುವ ಕೋವಿಗಳು, ವ್ಯವಸಾಯದ ಹತ್ಯಾರುಗಳು ಮತ್ತು ಕಬ್ಬಿಣದ ಸಲಾಕೆ ವಗೈರೆಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು ಮತ್ತು ರಿವಾಲ್ವರುಗಳು.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿಗಳು.
3. 12ನೇ ನಂಬರಿನ ಜೋಡು ಹೊಳವಿನ ಕೋವಿಗಳು.
4. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
5. 2", 1", ⅝", ½", ¼" ಕಬ್ಬಿಣದ ಸಲಾಕೆಗಳು.
6. 9"×4" ಮತ್ತು 8"×4" ಕಬ್ಬಿಣದ ಬೀಮ್ಸ್ (Beams).
7. 8'×3'×12 (Gage)ನ ಕಬ್ಬಿಣದ ತಗಡುಗಳು.
8. 3"×3"×¼"ನ (Angles) ಎಂಗ್ಯೂಲರ್ಸ್ ಅವಶ್ಯವಿರುವವರು ಇಂಡೆಂಟ್ ಕೊಟ್ಟಲ್ಲಿ ತರಿಸಿ ಕೊಡಬಹುದು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೆ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

Edited, Printed and Published by P. I. Bellappa at 'Kodagu' Press, Mercara, for 'Kodagu' Ltd.